ಸಂಪುಟ 01 । ಸಂಚಿಕೆ 102 । ಶುಕ್ರವಾರ 27 ಫೆಬ್ರವರಿ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಅಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ವಿಶ್ವ NGO ದಿನ**

ವಿಶ್ವ NGO ದಿನವು ಎಲ್ಲಾ ಸರ್ಕಾರೇತರ ಮತ್ತು ಲಾಭರಹಿತ ಸಂಸ್ಥೆಗಳನ್ನು ಮತ್ತು ಸಮಾಜಕ್ಕೆ ಕೊಡುಗೆ ನೀಡುವ ಅವುಗಳ ಹಿಂದಿರುವ ಜನರನ್ನು ಗುರುತಿಸಲು, ಆಚರಿಸಲು ಮತ್ತು ಗೌರವಿಸಲು ಸಮರ್ಪಿತವಾಗಿದೆ.

**2) ಚಂದ್ರಶೇಖರ್ ಆಜಾದ್. ಅವರ ಪುಣ್ಯ ಸ್ಮರಣೆ**

1931 ರಲ್ಲಿ ಅಲಹಾಬಾದ್‌ನ ಆಲ್ಫ್ರೆಡ್ ಪಾರ್ಕ್‌ನಲ್ಲಿ (ಈಗ ಚಂದ್ರಶೇಖರ್ ಆಜಾದ್ ಪಾರ್ಕ್) 24 ನೇ ವಯಸ್ಸಿನಲ್ಲಿ ನಿಧನರಾದ ಪ್ರಸಿದ್ಧ ಕ್ರಾಂತಿಕಾರಿ ಹುತಾತ್ಮರಾದ ಚಂದ್ರಶೇಖರ್ ಆಜಾದ್ ಅವರ ಪುಣ್ಯತಿಥಿಯನ್ನು ಫೆಬ್ರವರಿ 27 ರಂದು ಆಚರಿಸಲಾಗುತ್ತದೆ. ಬ್ರಿಟಿಷ್ ಪೊಲೀಸರಿಂದ ಸೆರೆಯಾಗುವುದನ್ನು ತಪ್ಪಿಸಲು ಅವರು ಸ್ವತಃ ಗುಂಡು ಹಾ-ರಿಸಿಕೊಂಡರು.

## ಸುಭಾಷಿತ

ನಿಮ್ಮಬದುಕಿನಿಂದ ಸೂರ್ಯ ಮರೆಯಾದನೆಂದು ನೀವು ಅಳುತ್ತಾ ಕೂತರೆ, ಆ ಕಣ್ಣೀರಿನಲ್ಲಿ ದೃಷ್ಟಿ ಮಸುಕಾಗಿ ನಕ್ಷತ್ರಗಳು ಕಾಣದೇ ಹೋದಾವು.

ರವೀಂದ್ರನಾಥ ಟ್ಯಾಗೋರ್

## ವಿಜೃಂಭಣೆಯಿಂದ ಜರುಗಿದ ಶ್ರೀ ಬಸವೇಶ್ವರ ಜಾತ್ರೆ

**ನೈಜ್ಯ ದೆಸೆ ನ್ಯೂಸ್**

ಹಾಲಾಪೂರ: ಗ್ರಾಮದ ಶ್ರೀ ಬಸವೇಶ್ವರ ಜಾತ್ರಾ ಮಹೋತ್ಸವವು ಪ್ರತಿ ವರ್ಷದಂತೆ ಈ ವರ್ಷವೂ ಸಹ ಶಿವರಾತ್ರಿ ಅಮಾವಾಸ್ಯೆಯ ನವಮಿಯಂದು ಜಾತ್ರಾ ನಿಮಿತ್ಯವಾಗಿ ಬೆಳಗಿನ ಜಾವ ರುದ್ರಭಿಷೇಕ, ಬಿಲ್ವಪತ್ರೆ, ಹೂವಿನ ಅಲಂಕಾರ ಪೂಜಾ ಕಾರ್ಯಕ್ರಮವನ್ನು ಶ್ರೀ ಬಸವರಾಜ ಸ್ವಾಮಿ ಕಾಳಹಸ್ತಿಮಠ, ಶ್ರೀ ಮಂಜುನಾಥ-ಸ್ವಾಮಿ ಹಳೆಕೋಟಿ ಇವರಿಂದ ನೆರವೇರಿಸಿ, ದೇವಸ್ಥಾನದ ಅರ್ಚಕರಾದ ಶ್ರೀ ಚೆನ್ನಯ್ಯ ತಾತನವರು ಉಪಸ್ಥಿತರಿದ್ದರು.



ನಂತರ ಜಾತ್ರೆಗೆ ಬಂದ ಸರ್ವ ಭಕ್ತಾದಿಗಳಿಗೆ ಮಹಾಪ್ರಸಾದ ವ್ಯವಸ್ಥೆ ಜರುಗಿತು. ಸಂಜೆ ಗಂಗೆಸ್ಥಳಕ್ಕೆ ಪೂಜೆ, ಆರು ಗಂಟೆಗೆ ಶ್ರೀ ಬಸವೇಶ್ವರರ ಉಚ್ಚಯ ಕಾರ್ಯಕ್ರಮವು ಬಹಳ ವಿಜೃಂಭಣೆಯಿಂದ ನಡೆಯಿತು. ಈ ಸಂದರ್ಭದಲ್ಲಿ ಪೂಜ್ಯರು, ಗಣ್ಯರು ಹಾಗೂ ಹಾಲಾಪೂರ ಸುತ್ತಮುತ್ತಲಿನ ಗ್ರಾಮಗಳ ಸರ್ವ ಸದ್ಭಕ್ತಾದಿಗಳು ಭಾಗವಹಿಸಿದ್ದರು.

# ಬೆಂಗಳೂರಲ್ಲಿ ಅಕ್ರಮವಾಗಿ ನೆಲೆಸಿರುವ ವಿದೇಶಿ ಪ್ರಜೆಗಳ ದಾಖಲಾತಿಗಳ ಪರಿಶೀಲನೆ

**ನೈಜ್ಯ ದೆಸೆ ನ್ಯೂಸ್**

**ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ನೆಲೆಸಿರುವ ವಿದೇಶಿ ಪ್ರಜೆಗಳ ದಾಖಲಾತಿಗಳನ್ನು ಪರಿಶೀಲನೆ ನಡೆಸುತ್ತಿರುವ ಪೊಲೀಸರು ನಿನ್ನೆ ಒಂದೇ ದಿನ ಸುಮಾರು ಎರಡು ಸಾವಿರಕ್ಕೂ ಹೆಚ್ಚು ವಿದೇಶಿಗರನ್ನು ವಿಚಾರಣೆ ನಡೆಸಿದ್ದಾರೆ.**

ಪೂರ್ವ ವಿಭಾಗದ 14 ಪೊಲೀಸ್ ತಂಡಗಳು ರಾಮಮೂರ್ತಿನಗರ, ಕಲ್ಕೆರೆ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿ ಒಂದು ಸಾವಿರಕ್ಕೂ ಹೆಚ್ಚು ವಿದೇಶಿಗರು ನೆಲೆಸಿದ್ದ ಬಾಡಿಗೆ ಮನೆಗಳನ್ನು ಪತ್ತೆಹಚ್ಚಿ ಅವರ ದಾಖಲೆಗಳನ್ನು ಪರಿಶೀಲನೆ ನಡೆಸಿದರು. ಈ ಪೈಕಿ 11 ವಿದೇಶಿ ಪ್ರಜೆಗಳು ಸರಿಯಾದ ದಾಖಲೆಗಳಿಲ್ಲದೇ, ವೀಸಾ ಅವಧಿ ಮುಗಿದಿದ್ದರೂ ನೆಲೆಸಿರುವುದು ಕಂಡು ಬಂದಿದೆ. ಅವರ ಬಳಿ ಇರುವ ದಾಖಲೆಗಳಲ್ಲಿ ಅನುಮಾನ ಕಂಡು ಬಂದ ಹಿನ್ನೆಲೆಯಲ್ಲಿ ಅವುಗಳನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ.

ಈ ವಿಶೇಷ ಕಾರ್ಯಾಚರಣೆ ವೇಳೆ ಬಹುತೇಕ ನೈಜೀರಿಯಾ ಹಾಗೂ ಬಾಂಗ್ಲಾ ಪ್ರಜೆಗಳು ಅಕ್ರಮವಾಗಿ ನೆಲೆಸಿರುವುದನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ.ಇನ್ನೂ ಕೆಲವು ವಿದೇಶಿ ಪ್ರಜೆಗಳು ಯಾವ ದೇಶದಿಂದ ಯಾವ ಸಂದರ್ಭದಲ್ಲಿ ನಗರಕ್ಕೆ ಬಂದಿದ್ದಾರೆ, ಯಾರು ಅವರನ್ನು ಕರೆತಂದಿದ್ದಾರೆ, ಅವರ ಬಳಿ ಇರುವ ವೀಸಾ ಹಾಗೂ ಪಾಸ್‌ಪೋರ್ಟ್ ಮಾನ್ಯತೆಯ ಬಗ್ಗೆ ಸಮಗ್ರವಾಗಿ ಪೊಲೀಸರು ಪರಿಶೀಲನೆ ನಡೆಸುತ್ತಿದ್ದಾರೆ. ನಗರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಹಾಗೂ ಮಾದಕ ವಸ್ತು ಸಾಗಾಟ ಮತ್ತು ಮಾರಾಟ ತಡೆಗಟ್ಟುವ ನಿಟ್ಟಿನಲ್ಲಿ ಇದೇ ರೀತಿ ನಗರದ ಎಲ್ಲಾ ವಿಭಾಗಗಳಲ್ಲಿಯೂ ನೆಲೆಸಿರುವ ವಿದೇಶಿ ಪ್ರಜೆಗಳ ಬಗ್ಗೆ ಪೊಲೀಸರು ಪರಿಶೀಲನೆ ನಡೆಸುತ್ತಿದ್ದಾರೆ.ಈ ಹಿಂದೆಯೂ ಸಹ ಬಾಂಗ್ಲಾ ದೇಶದಿಂದ ಅಕ್ರಮವಾಗಿ ನಗರಕ್ಕೆ ಬಂದು ನೆಲೆಸಿರುವವರ ಬಗ್ಗೆ ಪೊಲೀಸರು ಕಾರ್ಯಾಚರಣೆ ನಡೆಸಿದ್ದರು.



ಅಲ್ಲದೇ ಕಳೆದ ಜನವರಿಯಲ್ಲಿ ಎಲೆಕ್ಟ್ರಾನಿಕ್‌ಸಿಟಿ ಮತ್ತು ಹೆಬ್ಬಗೋಡಿ ವ್ಯಾಪ್ತಿಯಲ್ಲಿ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ ಅಕ್ರಮವಾಗಿ ನೆಲೆಸಿದ್ದ ಬಾಂಗ್ಲಾ ಪ್ರಜೆಗಳನ್ನು ಪತ್ತೆ ಅವರ ಆಧಾರಕಾರ್ಡ್ ಹಾಗೂ ಗುರುತಿನ ಚೀಟಿಗಳನ್ನು ಪರಿಶೀಲನೆ ನಡೆಸಿದಾಗ ಅವರ ಬಳಿ ನಕಲಿ ಆಧಾರ್‌ಕಾರ್ಡ್‌ಗಳು ಪತ್ತೆಯಾದ ಹಿನ್ನಲೆಯಲ್ಲಿ ಅವರನ್ನು ಬಂಧಿಸಲಾಗಿತ್ತು. ವಿವಿಧ ವೀಸಾಗಳಲ್ಲಿ ಭಾರತಕ್ಕೆ ಬಂದು ನಗರದಲ್ಲಿ ನೆಲೆಸಿರುವ ವಿದೇಶಿಗರ ಬಗ್ಗೆಯೂ ಪೊಲೀಸರು ಮಾಹಿತಿಗಳನ್ನು ಕಲೆ ಹಾಕುತ್ತಿದ್ದಾರೆ.ವೀಸಾ ಅವಧಿ ಮುಗಿದಿದ್ದರೂ ತಮ ದೇಶಕ್ಕೆ ಹಿಂದಿರುಗದೇ ನಗರದಲ್ಲೇ ಅಕ್ರಮವಾಗಿ ವಾಸವಾಗಿರುವ ವಿದೇಶಿಗರು ಮಾಡುತ್ತಿರುವ ಉದ್ಯೋಗದ ಬಗ್ಗೆಯೂ ಪೊಲೀಸರು ಪರಿಶೀಲನೆ ನಡೆಸುತ್ತಿದ್ದಾರೆ.

## ಮಾರ್ಚ್ 4ರಿಂದ ಜೋಳ ಖರೀದಿ ಕೇಂದ್ರ ಆರಂಭ ದಂಡಾಧಿಕಾರಿ ಅರುಣ್ ಕುಮಾರ್ ದೇಸಾಯಿ

**ನೈಜ್ಯ ದೆಸೆ ನ್ಯೂಸ್**

**ಮಾಜಿ ಸಚಿವ ವೆಂಕಟರಾವ್ ನಾಡಗೌಡರು ಫೆ.26 ಗುರುವಾರ ಬೆಳಿಗ್ಗೆ 10 ಗಂಟೆಗೆ ಪ್ರೆಸ್ ಮೀಟ್ ಮಾಡಿ ರೈತರು ಜೋಳ ಕಟಾವು ಮಾಡಿ, 2 ತಿಂಗಳು ಕಳೆದರೂ ಕೂಡ ಖರೀದಿ ಕೇಂದ ತೆಗೆಯುತ್ತಿಲ್ಲವೆಂದು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದರು, ಆದರೆ ಸಂಜೆ 5:30ಕ್ಕೆ ತಹಶೀಲ್ದಾರ್ ಅರುಣ್ ಕುಮಾರ್ ದೇಸಾಯಿ ಮಾರ್ಚ್ 4 ರಿಂದ ಸಿಂಧನೂರಿನಲ್ಲಿ ಜೋಳ ಖರೀದಿ ಕೇಂದ್ರ ಆರಂಭ ಮಾಡಲಾಗುವುದೆಂದು**



ಪತ್ರಿಕಾ ಪ್ರಕಟಣೆ ಹೊರಡಿಸಿದ್ದಾರೆ.

ಅಂದು ಅಧೀಕ್ರತವಾಗಿ ಟಿಎಪಿಸಿ-ಎಮ್‌ಎಸ್ ಆವರಣದಲ್ಲಿ ಬೆಳಿಗ್ಗೆ 11 ಗಂಟೆಯಿಂದ ಪ್ರಾರಂಭ ಮಾಡಲಾಗುವುದು, ಈ ಖರೀದಿ ಕೇಂದ್ರವನ್ನು ಸರ್ಕಾರದ ಮಾರ್ಗಸೂಚನೆಗಳಂತೆ ಆರಂಭಿಸುತ್ತಿದ್ದು, ರೈತರು ತಮ್ಮ ಜೋಳವನ್ನು ಕನಿಷ್ಠ ಬೆಂಬಲ ಬೆಲೆಯ ಅಡಿಯಲ್ಲಿ ನೇರವಾಗಿ ಮಾರಾಟ ಮಾಡಬಹುದಾಗಿದೆ. ಇದರ ಮೂಲಕ ರೈತರಿಗೆ ನ್ಯಾಯ ಸಮ್ಮತ ಬೆಲೆ ಹಾಗೂ ಸುಗಮ ಖರೀದಿ ವ್ಯವಸ್ಥೆ ಕಲ್ಪಿಸಲಾಗುತ್ತದೆ ಎಂದಿದ್ದಾರೆ. "ರೈತರು ಸೂಕ್ಷ್ಮವಾಗಿ ಗಮನಿಸಬೇಕಾದ ವಿಷಯಗಳು" ಎಫ್‌ಎಕ್ಯೂ ಗುಣಮಟ್ಟದ ಜೋಳವನ್ನು ಮಾತ್ರ ಸ್ವೀಕರಿಸಲಾಗುವುದು, ಫಸಲು ನೋಂದಣಿ (ಫ್ರೂಟ್ಸ್ ಐಡಿ) ಕಡ್ಡಾಯ ಮಾಡಿದ ರೈತರಿಗೆ ಎಫ್‌ಐಎಫ್‌ಒ ಅಡಿಯಲ್ಲಿ ಮೊದಲು ನೋಂದಣಿ ಮಾಡಿದ ರೈತರಿಗೆ ಮೊದಲು ಆದ್ಯತೆ, ಜೋಳವನ್ನು ಸ್ವಚ್ಛವಾಗಿ ಮತ್ತು ಒಣಗಿದ ಸ್ಥಿತಿಯಲ್ಲಿ ತರಬೇಕು, ಎಲ್ಲಾ ರೈತ ಬಂಧುಗಳು ಈ ಸೌಲಭ್ಯವನ್ನು ಸದುಪಯೋಗ ಪಡೆದುಕೊಳ್ಳಲು ಮನವಿ ಮಾಡಿದ್ದಾರೆ.

# ಮಂತ್ರಾಲಯ ಮಠಕ್ಕೆ ಸುಕಾಲಪೇಟೆ ಭಕ್ತಾಧಿಗಳು ಹಸುಗಳಿಗಾಗಿ 28 ಟ್ರಾಕ್ಟರ್ ಮೇವು ವಿತರಣೆ

**ನೈಜ್ಯ ದೆಸೆ ನ್ಯೂಸ್**

**ಮಂತ್ರಾಲಯದ ಶ್ರೀರಾಘವೇಂದ್ರಸ್ವಾಮಿ ಮಠಕ್ಕೆ ನಗರದ ಸುಕಾಲಪೇಟೆಯ ಸಕಲ ಭಕ್ತಾಧಿಗಳು ಪ್ರತಿ ವರ್ಷದಂತೆ ಈ ವರ್ಷವು ಕೂಡ ಬಿಜೆಪಿ ಮುಖಂಡ ಕೆ.ಕರಿಯಪ್ಪ ನೇತೃತ್ವದಲ್ಲಿ 28 ಟ್ರಾಕ್ಟರ್ ಗಳಲ್ಲಿ ಹಸುಗಳಿಗೆ ಮೇವು ಕಳಿಸಿಕೊಡಲಾಯಿತು.**

ಮೊದಲಿಗೆ ಎಲ್ಲಾ 28 ಟ್ರಾಕ್ಟರ್ ಗಳಿಗೆ ಪೂಜೆ ಸಲ್ಲಿಸಿ ಟ್ರಾಕ್ಟರ್ ಚಲಾಯಿಸುವ ಚಾಲಕ-ರಿಗೂ ಹಾಗೂ ಮಂತ್ರಾಲಯ ಮಠಕ್ಕೆ



ಮೇವು ಕಳಿಸುತ್ತಿರುವ ಭಕ್ತಾದಿಗಳಿಗೂ ನಿಮ್ಮ ಪ್ರಯಾಣ ಸುಖಮವಾಗಿರಲಿ ಎಂದು ಹಾರೈಸಿ ತಾಲೂಕಿನ ಜನತೆಗೆ ಅದರಲ್ಲೂ ರೈತ ಸಮುದಾಯಕ್ಕೆ ಸುಖ ಸಮೃದ್ಧಿ, ಮಳೆ ಬೆಳೆ, ಈ ವರ್ಷ ಕರುಣಿಸಲಿ ಗುರು ರಾಯರು ಒಳ್ಳೇದು ಮಾಡಲಿ ಎಂದು ಶುಭ ಕೋರಿದರು.

## ಬ್ರಿಡ್ಜ್ ಕಮ್ ಬ್ಯಾರೇಜ್ ಕಾಮಗಾರಿಗೆ ಎಂಎಲ್ಸಿ ಬಸನಗೌಡ ಬಾದರ್ಲಿಯಿಂದ ಶಂಕುಸ್ಥಾಪನೆ

**ನೈಜ್ಯ ದೆಸೆ ನ್ಯೂಸ್**

**ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ಅವರೊಂದಿಗೆ ಚರ್ಚಿಸಿ, ತಾಲೂಕಿನ ಗೊರೇಬಾಳ ಮತ್ತು ಚನ್ನಳ್ಳಿ ಗ್ರಾಮಗಳ ಮಧ್ಯೆ ಹರಿಯುವ ಹಳ್ಳಕ್ಕೆ ಬ್ರಿಡ್ಜ್ ಕಮ್ ಬ್ಯಾರೇಜ್ ನಿರ್ಮಾಣ ಮಾಡುವ ಕಾಮಗಾರಿಯನ್ನು ಫೆ.26 ಗುರುವಾರದಂದು ಒಳಬಳ್ಳಾರಿ ಪರಮಪೂಜ್ಯ ಶ್ರೀಗಳ ನೇತೃತ್ವದಲ್ಲಿ ಎಂಎಲ್ಸಿ ಬಸನಗೌಡ ಬಾದರ್ಲಿ ಶಂಕುಸ್ಥಾಪನೆ ನೆರವೇರಿಸಿದರು.**

ಕಾಮಗಾರಿಯ ಟೆಂಡರ್ ಪ್ರಕ್ರಿಯೆಯನ್ನು ಈಗಾಗಲೇ ಪೂರ್ಣಗೊಳಿಸಿದ್ದು, ಈ ಕಾರ್ಯ ಆದೇಶದೊಂದಿಗೆ ಅನುದಾನ ರೂ 3



ಕೋಟಿ 23 ಲಕ್ಷ 52 ಸಾವಿರಕ್ಕೂ ಹೆಚ್ಚಿನ ಅನುದಾನದ ವೆಚ್ಚದಲ್ಲಿ ಅಡಿಗಲ್ಲು\ಗುದ್ದಲಿ ಪೂಜೆ ಕಾರ್ಯ ನೆರವೇರಿಸಲಾಯಿತು.

ಈ ವೇಳೆ: ಗೊರೇಬಾಳ ಗ್ರಾಮದ ಮುಖಂಡರಾದ ದೊಡ್ಡಭೀಮನಗೌಡ, ಸಣ್ಣಭೀಮನಗೌಡ, ಎಂ ರಂಗನಗೌಡ, ವೆಂಕಟೇಶ ರಾಗಲಪರ್ವಿ, ಹೊನ್ನನಗೌಡ ಬೆಳಗುರ್ಕಿ, ಅಮರೇಶಗೌಡ, ಸಿದ್ದನಗೌಡ ನೆಟೆಕಲ್, ಹನುಮಂತಪ್ಪ, ಷಣ್ಮುಖಗೌಡ, ಶರಣೇಗೌಡ, ಹಾಗೂ ಸಿದ್ದಲಿಂಗೇಶ, ಮಹೇಶ ಸೇರಿದಂತೆ ಗ್ರಾಮಸ್ಥರು ಇದ್ದರು.

# ಆರ್.ಡಿ.ಪಿ.ಆರ್ ಕ್ರೀಡಾಕೂಟಕ್ಕೆ ಅದ್ದೂರಿ ತೆರೆ ನೌಕರರು ಉತ್ಸಾಹದಿಂದ ಕೆಲಸ ಮಾಡಲು: ಜಿ.ಪಂ ಸಿಇಓ ಈಶ್ವರ್ ಕಾಂದೂ ಸಲಹೆ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ಸರಕಾರಿ ನೌಕರರು ಒತ್ತಡದ ಮಧ್ಯೆಯು ಉತ್ಸಾಹದಿಂದ ಕೆಲಸ ಮಾಡುವ ಪ್ರವೃತ್ತಿಯನ್ನು ಮೈಗೊಡಿಸಿಕೊಳ್ಳಬೇಕೆಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ್ ಕುಮಾರ್ ಕಾಂದೂ ಅವರು ಹೇಳಿದರು. ನಗರದ ಕೃಷಿ ವಿವಿಯ ಆವರಣದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಜಿಲ್ಲಾ ಪಂಚಾಯತ್ ವತಿಯಿಂದ ಆಯೋಜಿಸಿದ 2025-26ನೇ ಸಾಲಿನ ನೌಕರರ ವಾರ್ಷಿಕ ಕ್ರೀಡಾಕೂಟದಲ್ಲಿ ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದರು.**

ಕ್ರೀಡೆಯಲ್ಲಿರುವ ನಿಮ್ಮ ಉತ್ಸಾಹ ಕೆಲಸದಲ್ಲಿಯು ತೊಡಗಿಸಿಕೊಳ್ಳಬೇಕು. ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಪ್ರತಿ ನಿತ್ಯ ಕ್ರೀಡಾ ಚಟುವಟಿಕೆಯಲ್ಲಿ ನಿಮ್ಮನ್ನು ನೀವು ಸಕ್ರಿಯವಾಗಿ ತೊಡಗಿಸಿಕೊಳ್ಳುವ ಮೂಲಕ ದೈಹಿಕ, ಮಾನಸಿಕವಾಗಿ ಆರೋಗ್ಯವನ್ನು ಸದೃಢರನ್ನಾಗಿಸಿಕೊಳ್ಳಲು ಸಾಧ್ಯವಾಗುತ್ತದೆಂದು ತಿಳಿಸಿದರು.



ಕಳೆದ ಎರಡು ದಿನಗಳ ಕಾಲ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ನಿಮ್ಮಲ್ಲಿರುವ ಪ್ರತಿಭೆಯನ್ನು ಪ್ರದರ್ಶಿಸಲು ಸಹಕಾರಿಯಾಗಿದೆ ಎಂದರು. ಕ್ರೀಡಾಕೂಟವನ್ನು ವ್ಯವಸ್ಥಿತವಾಗಿ ಆಯೋಜಿಸಿ ಯಶಸ್ವಿಗೆ ಶ್ರಮಿಸಿದ ಜಿ.ಪಂ ಅಧಿಕಾರಿಗಳಿಗೆ ಹಾಗೂ ವಿವಿಧ ತಾಲೂಕ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರಿಗೆ ಅಭಿನಂದನೆ ಸಲ್ಲಿಸಿದರು.

ಕೃಷಿ ವಿವಿಯ ಜಗಜ್ಯೋತಿ ಶ್ರೀ ಬಸವೇಶ್ವರ ಸಭಾಂಗಣದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ನೋಡುಗರ ಮನ ರಂಜಿಸಿದ್ದವು. ಜಿ.ಪಂ ತಂಡದ ವಿಜೇತರ ಪಟ್ಟಿ: 200 ಹಾಗೂ 400 ಮೀ ಓಟದಲ್ಲಿ ಕು.ಅಕ್ಷಿತಾ ಇವರು ದ್ವಿತೀಯ ಸ್ಥಾನ, ಮಹಿಳೆಯರ ವಿಭಾಗ ಶಟಲ್ ಬ್ಯಾಡ್ಮಿಂಟನ್ ಹಾಗೂ ಟೇಬಲ್ ಟೆನಿಸ್ ಅಲ್ಲಿ ಮಾನಸಾ, ರಂಜಿತಾ, ಕು.ಕಲ್ಪನಾ ಇವರು ಪ್ರಥಮ ಪಡೆದರು. ಪುರುಷರು ವಿಭಾಗ ಶಟಲ್ ಬ್ಯಾಡ್ಮಿಂಟನ್ ನಲ್ಲಿ ಸತೀಶ್, ರಾಘವೇಂದ್ರ ಕುಲಕರ್ಣಿ, ವೇಣುಗೋಪಾಲ್ ವರಪ್, ಬಸವೇಶ್ವರ,





ಸಲಿಮಾಲೀಕ್ ಇವರು ಪ್ರಥಮ ಸ್ಥಾನ ಪಡೆದರು. ನರಸರೆಡ್ಡಿ ಇವರು ಪುರುಷರು 200 ಮೀ ಓಟ, ಶಾಟ್ ಪುಟ್, ಉದ್ದ ಜಿಗಿತದಲ್ಲಿ ಪ್ರಥಮ ಪಡೆದರು. ನಿಂಗಪ್ಪ ಇವರು ಬರ್ಚಿ ಎಸೆತದಲ್ಲಿ ಪ್ರಥಮ ಹಾಗೂ 100 ಮೀ ಓಟದಲ್ಲಿ ದ್ವಿತೀಯ ಸ್ಥಾನ ಪಡೆದರು.

ಮಹಿಳೆಯರ ಚೆಸ್ ಅಲ್ಲಿ ಉರುಕುಂದಮ್ಮ ದ್ವಿತೀಯ ಸ್ಥಾನ ಹಾಗೂ ಪುರುಷರು ಚೆಸ್ ಅಲ್ಲಿ ಬಸವೇಶ್ವರ ಪ್ರಥಮ ಸ್ಥಾನ ಪಡೆದರು. ಗುಂಪು ಕ್ರೀಡೆಗಳಾದ ಮಹಿಳೆಯರ ಥ್ರೋಬಾಲ್ ನಲ್ಲಿ ಮಾನಸಾ ಹಾಗೂ ತಂಡ ದ್ವಿತೀಯ ಸ್ಥಾನ, ಮಹಿಳೆಯರ ಹಗ್ಗಜಗ್ಗಾಟ ಕ್ರೀಡೆಯಲ್ಲಿ ಕು.ಪೂಜಾ ಹಾಗೂ ತಂಡ ಪ್ರಥಮ ಸ್ಥಾನ ಪಡೆದರು. ಮಾನ್ವಿ ಮತ್ತು ರಾಯಚೂರು ಜಿಲ್ಲಾ ಪಂಚಾಯತ ತಂಡಗಳ ನಡುವೆ ನಡೆದ ಕ್ರಿಕೆಟ್ ಫೈನಲ್ ಪಂದ್ಯಾವಳಿಯಲ್ಲಿ ಮಾನ್ವಿ ತಂಡ ಗೆದ್ದು ಜಿಲ್ಲಾ ಪಂಚಾಯತ್ ರನ್ನರ್ ಆಪ್ ಪ್ರಶಸ್ತಿ ಪಡೆದುಕೊಂಡಿತು. ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಹಾಲಸಿದ್ದಪ್ಪ ಪೂಜೇರಿ, ಯೋಜನಾ ನಿರ್ದೇಶಕರು ಶರಣಬಸವರಾಜ ಕೆ, ಮುಖ್ಯ ಯೋಜನಾಧಿಕಾರಿ ಡಾ.ಟಿ.ರೋಣಿ, ಮುಖ್ಯ ಲೆಕ್ಕಾಧಿಕಾರಿ ವಿಜಯಶಂಕರ ಸೇರಿದಂತೆ ಜಿಲ್ಲೆಯ ವಿವಿಧ ತಾಲೂಕ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು, ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಇದ್ದರು.

# ಕ್ರೀಡಾ ಮತ್ತು ಸಾಂಸ್ಕೃತಿಕ ಉತ್ಸವ ಉದ್ಘಾಟನೆ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ಸಾರ್ವಜನಿಕ ಸೇವೆಯಲ್ಲಿ ತೊಡಗಿರುವ ಸರ್ಕಾರಿ ನೌಕರರು ಕೆಲಸ ಮಧ್ಯೆಯೇ ಕ್ರೀಡಾಚಟುಟಿ–ಕೆಗಳಲ್ಲಿ ಭಾಗವಹಿಸಿ, ಮಾನಸಿಕ ಮತ್ತು ದೈಹಿಕ ಸದೃಢತೆ ಸಾಧಿಸಬೇಕು' ಎಂದು ಜಿಲ್ಲಾ ಪಂಚಾಯಿತಿ ಸಿಇಒ ಈಶ್ವರ ಕುಮಾರ್ ಕಾಂದೂ ಹೇಳಿದರು.**

ಇಲ್ಲಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕ್ರೀಡಾಂಗಣದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಯುವಜನಸೇವಾ ಮತ್ತು ಕ್ರೀಡಾ ಇಲಾಖೆ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಕ್ರೀಡಾ ಮತ್ತು ಸಾಂಸ್ಕೃತಿಕ ಉತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸರ್ಕಾರಿ ನೌಕರರು ಮುಖ್ಯವಾಗಿ ಜನಸಾಮಾನ್ಯರ ನಿರೀಕ್ಷೆಯಂತೆ ಕೆಲಸ ನಿರ್ವಹಿಸಬೇಕು. ಕುಟುಂಬ



ನಿರ್ವಹಣೆ ಜತೆ ಸಾರ್ವಜನಿಕ ಸಮಸ್ಯೆಗಳಿಗೆ ಸ್ಪಂದಿಸಬೇಕು. ಸರ್ಕಾರಿ ಅಧಿಕಾರಿಗಳು, ನೌಕರರು ಕಾಲಕ್ಕೆ ತಕ್ಕಂತೆ ಕಾರ್ಯ ಶೈಲಿಯನ್ನು ಮಾರ್ಪಾಡು ಮಾಡಿಕೊಳ್ಳಬೇಕು' ಎಂದರು.

ಸರ್ಕಾರಿ ನೌಕರರ ಸಂಘದ ಕಲಬುರಗಿ ವಿಭಾಗೀಯ ಉಪಾಧ್ಯಕ್ಷ ಕೃಷ್ಣ ಶಾವಂತಗೇರಿ ಮಾತನಾಡಿ, 'ರಾಜ್ಯಾದ್ಯಂತ ನೌಕರರಿಗಾಗಿಯೇ ಕ್ರೀಡಾಕೂಟಗಳನ್ನು ಏರ್ಪಡಿಸಿ ನೌಕರರು ಪ್ರತಿ ನಿತ್ಯದ ಜಂಜಾಟಗಳಿಂದ ಹೊರಬರುವಂತೆ ಮಾಡಲಾಗುತ್ತಿದೆ' ಎಂದು ಹೇಳಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಹಾಲಸಿದ್ದಪ್ಪ ಪೂಜೇರಿ, ಜಿಲ್ಲಾ ಪಂಚಾಯಿತಿ ಯೋಜನಾ ನಿರ್ದೇಶಕ ಶರಣಬಸವರಾಜ ಕೆ., ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ಡಾ.ಟಿ.ರೋಣಿ, ಜಿಲ್ಲಾ ಪಂಚಾಯಿತಿ ಮುಖ್ಯ ಲೆಕ್ಕಾಧಿಕಾರಿ ವಿಜಯಶಂಕರ, ತಾಲ್ಲೂಕು ಪಂಚಾಯಿತಿ ಇಒ ಚಂದ್ರಶೇಖರ ಪವಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಡಾ.ಸುರೇಂದ್ರ ಬಾಬು, ಆಯುಷ್ ಇಲಾಖೆಯ ಡಾ.ಶಂಕರಗೌಡ, ಯುವಜನಸೇವಾ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಈರೇಶ ನಾಯಕ ಸೇರಿದಂತೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

# ಉಚಿತವಾಗಿ ಹೊಲಿಗೆ ಯಂತ್ರಗಳ ವಿತರಣೆ–ಸುಡಾ ಅಧ್ಯಕ್ಷ ಬಾಬುಗೌಡ ಬಾದರ್ಲಿ




**ನೈಜ್ಯ ದೆಸೆ ನ್ಯೂಸ್**

ಸಿಂಧನೂರು: ಫೆ 26 ನಗರದ ಶಾಸಕರ ಕಾರ್ಯಾಲಯದಲ್ಲಿ ಗುರುವಾರದಂದು ಡಿ. ದೇವರಾಜ ಅರಸು ಅಭಿವೃದ್ಧಿ ನಿಗಮದ ವತಿಯಿಂದ 2024–25ನೇ ಸಾಲಿನ ಯೋಜನೆಯಡಿ ತಾಲೂಕಿನ ವಿವಿಧ ಗ್ರಾಮಗಳ




**ಆಯ್ದ 22 ಫಲಾನುಭವಿಗಳಿಗೆ ಉಚಿತವಾಗಿ ಹೊಲಿಗೆ ಯಂತ್ರಗಳನ್ನು ವಿತರಿಸಲಾಯಿತು.**

ಸಿಂಧನೂರು ನಗರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಬಾಬುಗೌಡ ಬಾದರ್ಲಿ ಅವರು ಫಲಾನುಭವಿಗಳಿಗೆ ಹೊಲಿಗೆ ಯಂತ್ರಗಳನ್ನು ಹಸ್ತಾಂತರಿಸಿ ಮಾತನಾಡಿ, "ಸರ್ಕಾರದ ಸೌಲಭ್ಯಗಳನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಂಡು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು," ಎಂದು ಆಶಿಸಿದರು. ಈ ಸಂದರ್ಭದಲ್ಲಿ ವೇದಿಕೆಯ ಮೇಲೆ ಮಂಜುನಾಥ್ ಜಿಲ್ಲಾ ವ್ಯವಸ್ಥಾಪಕರು ಡಿ. ದೇವರಾಜ ಅರಸು ಅಭಿವೃದ್ಧಿ ನಿಗಮ,ಶಿವಕುಮಾರ ತಾಲೂಕು ಅಭಿವೃದ್ಧಿ ಅಧಿಕಾರಿಗಳು, ಖಾಜಿ ಮಲ್ಲಿಕ್ ವಕೀಲರು ಹಾಗೂ ನಗರ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರು, ಅನಿಲ್ ಕುಮಾರ್ ವೈ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರು,ಶ್ರೀದೇವಿ ಶ್ರೀನಿವಾಸ ಅಧ್ಯಕ್ಷರು ಸ್ತ್ರೀಶಕ್ತಿ ಮಹಿಳಾ ಒಕ್ಕೂಟ,ನಿಂಗಪ್ಪ ಎಂ ಅಧ್ಯಕ್ಷರು ಗ್ರಾಮೀಣ ಬ್ಲಾಕ್ ಕಾಂಗ್ರೆಸ್ ,ಶಿವನಗೌಡ ಬೆಲೆಕೊಡಲಗಿ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರು ಹಾಗೂ ವಿವಿಧ ಗ್ರಾಮಗಳಿಂದ ಬಂದಿದ್ದ ಫಲಾನುಭವಿಗಳು ಭಾಗವಹಿಸಿದ್ದರು.

# ಮಹತ್ವಾಕಾಂಕ್ಷಿ ಜಿಲ್ಲೆಗೆ ತಜ್ಞರ ನೇಮಕಕ್ಕೆ ಒತ್ತು: ತಾಯಿ, ಮಕ್ಕಳ ಆರೈಕೆಗೆ ಜಿಲ್ಲಾಧಿಕಾರಿಗಳ ಸೂಚನೆಯಂತೆ ದೇವದುರ್ಗಕ್ಕೆ ಪ್ರಸೂತಿ ತಜ್ಞರ ನೇಮಕ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ಕಲ್ಯಾಣ ಕರ್ನಾಟಕ ಭಾಗದಲ್ಲಿ ಪ್ರಸೂತಿ ಆರೈಕೆ ಸೇವೆಗೆ ಹೆಚ್ಚಿನ ಮಹತ್ವ ನೀಡುತ್ತಿರುವ ಕರ್ನಾಟಕ ಸರಕಾರದ ದೂರ ದೃಷ್ಟಿಯನ್ನು ಹೊಂದಿದ ಹಿನ್ನಲೆ ಹಾಗೂ ಮಹತ್ವಾಕಾಂಕ್ಷಿ ಸಂಪೂರ್ಣತಾ ಯೋಜನೆಯಡಿ ಜಿಲ್ಲೆಯು ಇರುವ ಕಾರಣದಿಂದಾಗಿ ಜಿಲ್ಲೆಯಲ್ಲಿ ತಾಯಿ ಮಕ್ಕಳ ಸುರಕ್ಷತೆಗಾಗಿ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಅವರು ಖುದ್ದು ಒತ್ತಾಸೆ ಹಾಗೂ ಮುತವರ್ಜಿ ವಹಿಸಿ ಜಿಲ್ಲೆಯ ದೇವದುರ್ಗ ತಾಲೂಕಿಗೆ ಸೇವಾ ನಿರತ ಹಾಗೂ ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿ ಸ್ಥಳ ನಿಯುಕ್ತಿಗಾಗಿ ಕಾಯುತ್ತಿದ್ದ**



ಇಬ್ಬರೂ ಪ್ರಸೂತಿ ತಜ್ಞರನ್ನು ನೇಮಕ ಮಾಡಿಸುವ ಮೂಲಕ ದೇವದುರ್ಗ ತಾಲೂಕಿನ ಗ್ರಾಮೀಣ **ಭಾಗದ ಜನತೆಯು ಹೆರಿಗೆಗಾಗಿ ರಾಯಚೂರಿಗೆ ಅಲೆಯುವುದನ್ನು ನಿಲ್ಲಿಸಿದ್ದಾರೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ ಸುರೇಂದ್ರ ಬಾಬು ಅವರು ತಿಳಿಸಿದ್ದಾರೆ.**

ಸುಸಜ್ಜಿತ ಹೆರಿಗೆ ಕೊಠಡಿ, ಅತ್ಯಾಧುನಿಕ ಉಪಕರಣಗಳು, ನುರಿತ ವೈದ್ಯರುಗಳನ್ನು ಹೊಂದಿರುವ ಜಿಲ್ಲೆಯ ಆರೋಗ್ಯ ಕೇಂದ್ರಗಳಲ್ಲಿ ಕಡು ಬಡವರಿಗೆ ಗುಣಮಟ್ಟದ ಆರೋಗ್ಯ ಸೇವೆಯನ್ನು ಅದರಲ್ಲೂ ಹೆರಿಗೆಯೆನ್ನುವ ಮಹತ್ವಪೂರ್ಣ ಸನ್ನಿವೇಶದಲ್ಲಿ ಯಾವುದೇ ತೊಂದರೆಯಾಗದಂತೆ ಹೆರಿಗೆ ನಿರ್ವಹಿಸುವ ಜವಾಬ್ದಾರಿಯನ್ನು ಜಿಲ್ಲೆಯಲ್ಲಿ ಮಾಡಲಾಗುತ್ತಿದೆ.

ಅಲ್ಲದೆ ತಕ್ಷಣವೇ ಶಸ್ತ್ರಚಿಕಿತ್ಸೆ ಕೈಗೊಳ್ಳುವ ಜವಾಬ್ದಾರಿಯ ನಿರ್ವಹಣೆಗಾಗಿ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ನಂದೀತಾ ಎಮ್.ಎನ್. ಅವರು ಸ್ಥಳ ನಿಯುಕ್ತಿಗೊಂಡ ಹಿರಿಯ ತಜ್ಞವೈದ್ಯರಾದ ಡಾ.ಪುಷ್ಪಲತಾ ಹಾಗೂ ಡಾ.ರವಿಕಿರಣ್ ಅವರೊಂದಿಗೆ ಜೊತೆಗೂಡಿ ಸಂವಹನ ಕೈಗೊಂಡಿದ್ದು, ಫೆ.24ರಂದು ಪ್ರಸೂತಿ ತಜ್ಞರಾದ ಡಾ.ರವಿಕಿರಣ್ ಹಾಗೂ ತಂಡವು ಎರಡು ಶಸ್ತ್ರಚಿಕಿತ್ಸಾ ಹೆರಿಗೆಯನ್ನು ಕೈಗೊಂಡಿದ್ದು, ತಾಯಿ ಮಗು ಆರೋಗ್ಯವಾಗಿದ್ದಾರೆ. ದೇವದುರ್ಗ ತಾಲೂಕಿನ ಜನತೆ ಹೆರಿಗೆಗಾಗಿ ರಾಯಚೂರುಗೆ ಬರುವ ಸಮಯದ ಉಳಿತಾಯ ಮಾಡುವ ಹಾಗೂ ತಾಯಿ ಮಗುವಿನ ಸುರಕ್ಷತೆಗೆ ಒಂದು ಹೆಜ್ಜೆ ಮುಂದಿಟ್ಟಂತಾಗಿದೆ, ಸಾರ್ವಜನಿಕರು ಇದರ ಪಡೆಯುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳಾದ ಡಾ.ಸುರೇಂದ್ರ ಬಾಬು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಘವೇಂದ್ರ ಸ್ವಾಮಿಗಳ ವರ್ಧಂತಿ ಉತ್ಸವ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ರಾಘವೇಂದ್ರ ಸ್ವಾಮಿಗಳ ವರ್ಧಂತಿ ಉತ್ಸವ (ಜನ್ಮದಿನ)ದ ಪ್ರಯುಕ್ತ ಮಂಗಳವಾರ ಮಂತ್ರಾಲಯದ ಮಠದಲ್ಲಿ ಹಲವು ಧಾರ್ಮಿಕ ವಿಧಿವಿಧಾನಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಬೆಳಿಗ್ಗೆ ರಾಘವೇಂದ್ರ ಸ್ವಾಮಿಗಳ ಮೂಲ ಬೃಂದಾವನಕ್ಕೆ ಮಹಾ ಅಭಿಷೇಕ ನೆರವೇ–ರಿಸಲಾಯಿತು.**

ರಾಘವೇಂದ್ರ ಸ್ವಾಮಿಗಳ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ಆಧ–್ಯಾತ್ಮಿಕವಾಗಿ ಉನ್ನತೀಕರಿಸುವ ನಾದಹಾರಂ ಕಾರ್ಯಕ್ರಮವನ್ನು ಉದ್ಘಾಟಿಸಿದರು. ನೂರಾರು



ಸಂಗೀತಗಾರರು ಒಟ್ಟಾಗಿ ಭಗವಂತ ಮತ್ತು ರಾಯರು ಅವರ ಸಂಕೀರ್ತನೆಗಳನ್ನು ಹಾಡಿದರು. ನಂತರ, ರಾಯರು ರಥೋತ್ಸವಕ್ಕೆ ಚಾಲನೆ ನೀಡಿದರು. ನವರತ್ನ ರಥದಲ್ಲಿ ರಾಯರು ಅವರ ಚಿನ್ನದ ಪ್ರತಿಮೆಯನ್ನು ಭಕ್ತಿಪೂರ್ವಕವಾಗಿ ಇರಿಸಲಾಯಿತು ಮತ್ತು ಶ್ರೀ ಮಠದ ಪ್ರಕಾರದಲ್ಲಿ ರಥೋತ್ಸವವನ್ನು ನಡೆಸಲಾಯಿತು.

ರಾಘವೇಂದ್ರ ಸ್ವಾಮಿಗಳ ಭಕ್ತರು ಮತ್ತು ಶಿಷ್ಯರು ಹೆಚ್ಚಿನ ಸಂಖ್ಯೆಯಲ್ಲಿ ಎಲ್ಲಾ ಪವಿತ್ರ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಶ್ರೀ ರಾಯರು ಮತ್ತು ಸ್ವಾಮೀ–ಜಿಯವರ ಆಶೀರ್ವಾದವನ್ನು ಪಡೆದರು. ಮಂತ್ರಾಲಯದಲ್ಲಿ ಮಂಗಳವಾರ ಶ್ರೀ ರಾಘವೇಂದ್ರ ಸ್ವಾಮಿ ರವರ 431ನೇ ಹುಟ್ಟು ಹಬ್ಬದ ನಿಮಿತ್ಯವಾಗಿ ನವರತ್ನ ಖಚಿತ ಚಿನ್ನದ ರಥದಲ್ಲಿ ರಾಯರ ಚಿನ್ನದ ಪ್ರತಿಮೆಯನ್ನು ಇಟ್ಟು ವೈಭವದಿಂದ ರಥೋತ್ಸವ ನಡೆಯಿತು

## ಸಾಹಿತ್ಯ ಸಿಂಚನ

ದಿಗ್ಭ್ರಮೆ..!

ನೀನೇನೋ ಇದ್ದಕ್ಕಿದ್ದಂತೆ
ಎದ್ದು ಹೋಗಿಯೇಬಿಟ್ಟೆ!
ನಾನಿನ್ನೂ ಕುಳಿತಿದ್ದೇನೆ..
ಇಲ್ಲಿ ಹಾಗೆಯೇ ಕದಲದೆ.!

ನೀ ಕುಳಿತಿದ್ದ ಜಾಗವನು
ಮತ್ತೆ–ಮತ್ತೆ ಮುಟ್ಟಿ–ಮುಟ್ಟಿ
ಮನದಟ್ಟು ಮಾಡಿಕೊಳ್ಳುತ್ತಿದ್ದೇನೆ
ಸತ್ಯ ಅರಗಿಸಿಕೊಳ್ಳಲಾಗದೆ.!

ನೀನು ನಡೆದು ಹೋದ
ದಿಕ್ಕಿನತ್ತಲೇ ನೋಡುತ್ತಿದ್ದೇನೆ
ಮರಳಿ ಬರಬಹುದೆಂಬ...
ಆಸೆ ಅದುಮಿಡಲಾಗದೆ.!

ಗಾಳಿಯ ಸದ್ದಿಗೆ ಎದ್ದೆದ್ದು
ಕನಲಿ ಕಾತರಿಸುತ್ತಿದ್ದೇನೆ..
ಆ ಹೆಜ್ಜೆ ಸಪ್ಪಳದ ದನಿಗೆ
ಕಿವಿ–ಕಂಗಳುಗಳ ಮುಚ್ಚದೆ.!

ಕನಸುಗಳ ಬಿಗಿ ಹಿಡಿದು
ಮೆಲ್ಲ ಕನವರಿಸುತ್ತಿದ್ದೇನೆ..
ಭರವಸೆಗಳ ದೀಪ ಹಚ್ಚಿ
ಕಾದಿಹೆನು ಎದೆಯ ತೆರೆದು.!

ನಿನ್ನಯ ಹೆಸರನೆ ಜಪಿಸುತ
ನಿರೀಕ್ಷೆಯಲಿ ಮಲಗಿದ್ದೇನೆ..
ಪ್ರತೀಕ್ಷಣವೂ ಪರಿತಪಿಸುತ
ಪ್ರತೀಕ್ಷೆಹಾದಿಯನೇ ಹೊದ್ದು.!

ನಂಬಿಕೆಗಳ ಸಾಯಿಸುತ
ಸರಿಯುತಿದೆ ಸಮಯ.!
ಬಡಿಯುವುದನೆ ಮರೆಯುತ್ತ
ಸಾಯುತಿದೆ ಹೃದಯ.!

ಬರುವವರಿಗೆ ಕಾಯುವುದು
ಕ್ಷಣಕ್ಷಣವೂ ರೋಮಾಂಚನ.!
ಬಾರದಿರುವವರಿಗೆ ಕಾಯುವುದು
ನರ–ನರದಿ ನೋವ ಸಿಂಚನ.!

ಎ.ಎನ್.ರಮೇಶ್. ಗುಬ್ಬಿ

# ಸಂಘದ ತಾಲೂಕ ಅಧ್ಯಕ್ಷ ಬಿ.ಟಿ. ವಜ್ಜಲಗೆ ಸನ್ಮಾನ

**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟಿ: ತಾಲೂಕಿನ ಹಿರೂರ ಗ್ರಾಮದ ಸರಕಾರಿ ಮಾದರಿ ಪ್ರಾಥಮಿಕ ಶಾಲೆ ಇದರ ಏಳನೇ ವರ್ಗದ ವಿದ್ಯಾರ್ಥಿಗಳ ಬೀಳ್ಕೊಡುವ ಹಾಗೂ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕ ಅಧ್ಯಕ್ಷ ಬಿ.ಟಿ. ವಜ್ಜಲ ಇವರನ್ನು ಸನ್ಮಾನಿಸಲಾಯಿತು.**



ಈ ಸಂದರ್ಭದಲ್ಲಿ ವೇದಮೂರ್ತಿ ಸಿ.ಎಸ್.ಹಿರೇಮಠ, ಕ್ಷೇತ್ರ ಸಮನ್ವಯಾಧಿಕಾರಿ ಆರ್.ಬಿ.ದಮ್ಮೂರಮಠ,ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷ ಸಂಗನಗೌಡ ಅಸ್ಕಿ, ಸಾಹಿತಿ ಖ್ಯಾತ ವಾಗ್ಮಿ ಅಶೋಕ ಹಂಚಲಿ, ಶಾಲೆಯ ಮುಖ್ಯ ಗುರುಗಳಾದ ಎಲ್ಎಸ್ ಗಸ್ತಿ, ಕೊಣ್ಣೂರು ಕ್ಲಸ್ಟರ್ ಸಮೂಹ ಸಂಪನ್ಮೂಲ ವ್ಯಕ್ತಿ ಎಸ್ ಎಸ್ ಯಾಳವಾರ, ಉಪಾಧ್ಯಕ್ಷ ಪಿ.ವೈ.ಚಲವಾದಿ, ಕಾರ್ಯದರ್ಶಿ ಎಸ್.ಬಿ.ಬೀರಗೊಂಡ, ಜಿ.ಪಿ.ಟಿ. ತಾಲೂಕ ಅಧ್ಯಕ್ಷ ಎನ್. ಎಸ್.ನೀರಲಗಿ, ಸಹ ಶಿಕ್ಷಕಿ ಶ್ರೀಮತಿ ಎಂ.ಜಿ. ಬಿರಾದಾರ, ಎಸ್ ಡಿ ಎಮ್ ಸಿ ಸದಸ್ಯರು, ಶಿಕ್ಷಕ ವರ್ಗ, ಗ್ರಾಮದ ಗಣ್ಯರು, ಹಿರಿಯರು, ಪಾಲಕರು ಹಾಗೂ ವಿದ್ಯಾರ್ಥಿಗಳು ಇದ್ದರು.

# ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಸಭೆ ರೈತರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಿ: ಜಿಲ್ಲಾಧಿಕಾರಿ ನಿತೀಶ್ ಕೆ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ರೈತರಿಂದ ಬಿಳಿಜೋಳ ಉತ್ಪನ್ನವನ್ನು ಖರೀದಿಸಲು ಬೆಂಬಲ ಬೆಲೆ ನಿಗದಿಪಡಿಸಲಾಗಿದೆ. ಖರೀದಿ ಸಮಯದಲ್ಲಿ ರೈತ–ರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಕ್ರಮವಹಿಸಬೇಕೆಂದು ಜಿಲ್ಲಾಧಿಕಾ–ರಿಗಳಾದ ನಿತೀಶ್ ಕೆ. ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.**

ಇತ್ತೀಚೆಗೆ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಜೋಳ ಖರೀದಿ ಕು–ರಿತು ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಈಗಾಗಲೇ ಸರ್ಕಾರದ ನಿರ್ದೇಶನ ಮತ್ತು ಜಿಲ್ಲಾಡಳಿತದಿಂದ ನಿಗಧಿಪಡಿಸಲಾಗಿರುವ




ಮಾನದಂಡಗಳನ್ವಯ ಈಗಾಗಲೇ ನೋಂದಣಿಯಾಗಿರುವ ಅಥವಾ ನೋಂದಣಿಯಾಗುವ ರೈತರಿಂದ ಬಿಳಿಜೋಳವನ್ನು ರೈತರಿಗೆ ಯಾವುದೇ ತೊಂದರೆಯಾಗದಂತೆ ಜಿಲ್ಲೆಯಲ್ಲಿ ಕರ್ನಾಟಕ ಆಹಾರ ಮತ್ತು ನಾಗ–ರಿಕ ಸರಬರಾಜು ನಿಗಮ ನಿಯಮಿತ ವತಿಯಿಂದ ಖರೀದಿ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕೆಂದು.

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಜೋಳ ಖರೀದಿಗೆ ಅವಶ್ಯವಿರುವ ಗೋಣಿ ಚೀಲಗಳ ಸಿದ್ಧತೆಯನ್ನು ಮಾಡಿಕೊಳ್ಳಬೇಕು. ಖರೀದಿ ಕೇಂದ್ರದಲ್ಲಿ ಬಳಸುವ ಡಿಜಿಟಲ್ ತೂಕ ಮಾಪನ ಯಂತ್ರಗಳನ್ನು ಕಡ್ಡಾಯವಾಗಿ ಕಾನೂನು ಮಾಪಸಶಾಸ್ತ್ರ ಇಲಾಖೆಯಿಂದ ಸ್ಟಾಂಪಿಂಗ್ ಮಾಡಿಸಿಕೊಳ್ಳುವಂತೆ ಖರೀದಿ ಕೇಂದ್ರದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಆಯಾ ಖರೀದಿ ಕೇಂದ್ರ ವ್ಯಾಪ್ತಿಯ ಕಾನೂನು ಮಾಪನ ಶಾಸ್ತ್ರ ಇಲಾಖೆಯ ನಿರೀಕ್ಷಕರುಗಳಿಗೆ ಸಂಬಂಧಪಟ್ಟ ಖರೀದಿ ಕೇಂದ್ರದಲ್ಲಿ ಬಳಸುತ್ತಿರುವ ಡಿಜಿಟಲ್ ತೂಕ ಮಾಪನ ಯಂತ್ರಗಳನ್ನು ಸ್ಟಾ ಯಟಿಂಗ್ ಮಾಡಿಸಿರುವ ಬಗ್ಗೆ ಪರಿಶೀಲಿಸುವಂತೆ ಕಾನೂನು ಮಾಪನ ಶಾಸ್ತ್ರ ಇಲಾಖೆಯ ಸಹಾಯಕ ನಿಯಂತ್ರಕರಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು. ಈ ಹಿಂದಿನ ಸಾಲಿನಲ್ಲಿ ಸಮಯಕ್ಕೆ ಸರಿಯಾಗಿ ಲಾರಿಗಳು ಖರೀದಿ ಕೇಂದ್ರಗಳಿಗೆ ಬಾರದೇ ಇರುವುದರಿಂದ ಖರೀದಿ ಪ್ರಕ್ರಿಯೆಯು ಮಂದಗತಿಯಲ್ಲಿ ಸಾಗಿದ್ದು, ಈ ಸಾಲಿನಲ್ಲಿ ಆ ರೀತಿ ಆಗದಂತೆ ನೋಡಿಕೊಳ್ಳಬೇಕು.

ಕಾರ್ಯಾದೇಶದಲ್ಲಿ ನೀಡಲಾಗಿರುವ 133 ಲಾರಿಗಳಿಗೆ ಜಿಪಿಎಸ್ ಅಳವಡಿಸಿಕೊಂಡು ಈ ಸಾಲಿನಲ್ಲಿ ನಿಯಮಾನುಸಾರ ಅಗತ್ಯಕ್ಕೆ ತಕ್ಕಂತೆ ಲಾರಿಗಳ ವ್ಯವಸ್ಥೆಯನ್ನು ಮಾಡಿಕೊಂಡು ಎಲ್ಲಾ ಖರೀದಿ ಕೇಂದ್ರಗಳಿಗೆ ನೀಡುವಂತೆ ಸಂಬಂಧಿಸಿದ ಅಧಿಕಾ–ರಿಗಳಿಗೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು. ಈ ವೇಳೆ ಕೆಎಫ್‌ಸಿಎಸ್‌ಸಿ ಜಿಲ್ಲಾ ವ್ಯವಸ್ಥಾಪಕರಾದ ಪ್ರಕಾಶ್ ಅವರು ಮಾತನಾಡಿ, ಎಫ್‌ಸಿಐ ತನಿಖಾ ತಂಡವು ನೀಡಿರುವ ವರದಿಯಾನುಸಾರ ಹಿಂದಿನ ಸಾಲಿನಲ್ಲಿ ಹಂಚಿಕೆಯಾಗಿ ಬಳಕೆಗೆ ಯೋಗ್ಯವಿರುವ 5,53,545 ಗೋಣಿ ಚೀಲಗಳು ವಿವಿಧ ಖರೀದಿ ಕೇಂದ್ರಗಳಲ್ಲಿ ಲಭ್ಯವಿರುವುದಾಗಿ ಮತ್ತು 2.50 ಲಕ್ಷ ನೂತನ ಗೋಣಿ ಚೀಲಗಳು ಜಿಲ್ಲೆಗೆ ಹಂಚಿಕೆಯಾಗಿದ್ದು, ಅತೀ ಶಿಘ್ರದಲ್ಲಿಯೇ ಕೇಂದ್ರಗಳಿಗೆ ತಲುಪಿಸುದಾಗಿ ಸಭೆಗೆ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ರಾಯಚೂರು ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್, ಲಿಂಗಸುಗೂರು ಸಹಾಯಕ ಆಯುಕ್ತರಾದ ಬಸವಣೆಪ್ಪ ಕಲಶೆಟ್ಟಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ನಜೀರ್ ಅಮಹದ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಪ್ರಕಾಶ್ ಚೌವಾಣ್, ಸಹಕಾರ ಸಂಘಗಳ ಉಪ ನಿಬಂಧಕರು, ಜಿಲ್ಲೆಯ ದೇವದುರ್ಗ, ಲಿಂಗಸುಗೂರು, ಮಾನವಿ, ರಾಯಚೂರು, ಸಿಂಧನೂರು, ಮಸ್ಕಿ, ಸಿರವಾರ ತಾಲೂಕಿನ ತಹಶೀಲ್ದಾರರು, ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತದ ವ್ಯವಸ್ಥಾಪಕರು ಸೇರಿದಂತೆ ಇತರರು ಇದ್ದರು.

## ನೇಮಕಾತಿ ಪ್ರಕಟಣೆ

NMDC ನೇಮಕಾತಿ 2026–6 ಮ್ಯಾನೇಜರ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಓಒಆಅ ನೇಮಕಾತಿ 2026: 6 ಮ್ಯಾನೇಜರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮ ಲಿಮಿಟೆಡ್ ಫೆಬ್ರವರಿ 2026 ರಲ್ಲಿ NMDC ಅಧಿಕೃತ ಅಧಿಸೂಚನೆಯ ಮೂಲಕ ಮ್ಯಾನೇಜರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಹೈದರಾಬಾದ್ – ತೆಲಂಗಾಣ, ದೆಹಲಿ – ನವದೆಹಲಿ, ಕೋಲ್ಕತ್ತಾ – ಪಶ್ಚಿಮ ಬಂಗಾಳ, ರಾಯ್‌ಪುರ – ಛತ್ತೀಸ್‌ಗಢ, ರಾಂಚಿ – ಜಾರ್ಖಂಡ್, ಬೆಂಗಳೂರು – ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 10–ಮಾರ್ಚ್–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 18–02–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10–ಮಾರ್ಚ್–2026 ಅಧಿಕೃತ ವೆಬ್‌ಸೈಟ್: nmdc.co.in

## ವಟಗಲನಲ್ಲಿ ಭಕ್ತಿ ಪರವಶ: ಶ್ರೀ ಬಸವೇಶ್ವರ ದೇವಸ್ಥಾನದ ಶಿಲಾ ಕಟ್ಟಡದ 'ಹೊಸ್ತಿಲು ಪೂಜೆ' ವೈಭವ

ನೈಜ್ಯ ದೆಸೆ ನ್ಯೂಸ್

**ವಟಗಲ: ಗ್ರಾಮದ ಆರಾಧ್ಯದೈವ ಶ್ರೀ ಬಸವೇಶ್ವರ ದೇವಸ್ಥಾನದ ನೂತನ ಕಲ್ಲ್ ಶಿಲಾ ಕಟ್ಟಡದ ನಿರ್ಮಾಣ ಕಾರ್ಯಕ್ಕೆ ಮೈಲಿಗಲ್ಲಾದ 'ಹೊಸ್ತಿಲು ಪೂಜೆ' ಕಾರ್ಯಕ್ರಮವು ಹರ–ಗುರು–ಚರಮೂರ್ತಿಗಳ ದಿವ್ಯ ಸಾನ್ನಿಧ್ಯದಲ್ಲಿ ಅತ್ಯಂತ ವೈಭವದಿಂದ ನೆರವೇರಿತು. ದೇವಸ್ಥಾನದ ಆವರಣದಲ್ಲಿ ನಡೆದ ಈ ಧಾರ್ಮಿಕ ಕಾರ್ಯಕ್ರಮದಲ್ಲಿ ವಿವಿಧ ಮಠಾಧೀಶರು ಪಾಲ್ಗೊಂಡು ಭಕ್ತಾದಿಗಳನ್ನು ಆಶೀರ್ವದಿಸಿದರು.**

ಗ್ರಾಮದ ಭಕ್ತಿ ಮತ್ತು ಒಗ್ಗಟ್ಟಿನ ಸಂಕೇತವಾಗಿ ಈ ಶಿಲಾ ಕಟ್ಟಡ ತಲೆ ಎತ್ತುತ್ತಿರುವುದು ವಿಶೇಷವಾಗಿದೆ. ಸಂತ–ಮಹಾಂತರ ಸಾನ್ನಿಧ್ಯ: ಕಾರ್ಯಕ್ರಮದಲ್ಲಿ ವಲಬಳ್ಳಾರಿಯ ಸ್ವಾಮೀ–ಜಿಗಳು, ಹುಣಕುಂಟಿ ಸ್ವಾಮೀಜಿಗಳು,





ಯದ್ದಲದೊಡ್ಡಿ ಸ್ವಾಮೀಜಿಗಳು, ನಿರಂಜನ ಸ್ವಾಮಿಗಳು, ಗಂಗಾಧರ ಸ್ವಾಮಿಗಳು, ಮ–ರಿಸ್ವಾಮಿಗಳು, ಬಸವಪ್ರಭು ಸ್ವಾಮಿಗಳು ಹಾಗೂ ಅಮರಯ್ಯ ಸ್ವಾಮಿಗಳು ಉಪಸ್ಥಿತರಿದ್ದು ಧಾರ್ಮಿಕ ವಿಧಿ–ವಿಧಾನಗಳನ್ನು ನೆರವೇರಿಸಿಕೊಟ್ಟರು. ಗಣ್ಯರ ಭಾಗಿ: ದೇವಸ್ಥಾನ ಸಮಿತಿಯ ಅಧ್ಯಕ್ಷರಾದ ಮಲ್ಲಣ್ಣ ಕಡಬೂರು ಹಾಗೂ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಬಸನಗೌಡ ರೆಡ್ಡಿ ಅವರ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ದೇವಸ್ಥಾನ ಸಮಿತಿಯ ಸರ್ವ ಸದಸ್ಯರು, ಗ್ರಾಮ ಪಂಚಾಯತ್ ಸದಸ್ಯರು ಮತ್ತು ಗ್ರಾಮದ ಹಿರಿಯರು ಪಾಲ್ಗೊಂಡಿದ್ದರು. ಈ ಸಮಾರಂಭವು ಗ್ರಾಮದಲ್ಲಿ ಹಬ್ಬದ ವಾತಾವರಣವನ್ನು ಸೃಷ್ಟಿಸಿತ್ತು. ಶ್ರೀ ಬಸವೇಶ್ವರನ ಕೃಪೆಯಿಂದ ದೇವಸ್ಥಾನದ ಮುಂದಿನ ಕಾರ್ಯಗಳು ಶೀಘ್ರವಾಗಿ ಪೂರ್ಣಗೊಳ್ಳಲಿ ಎಂದು ಗ್ರಾಮಸ್ಥರು ಪ್ರಾರ್ಥಿಸಿದರು.

### ಕಾರ್ಯಕ್ರಮದ ಮುಖ್ಯಾಂಶಗಳು

- **ಪ್ರಸಾದ ಸೇವೆ:** ಕಾರ್ಯಕ್ರಮಕ್ಕೆ ಬಂದ ಭಕ್ತಾದಿಗಳಿಗೆಲ್ಲರಿಗೂ ವೆಂಕಟೇಶ್ ಸ್ವಾಮಿ ಅವರು ಅತ್ಯಂತ ಶ್ರದ್ಧೆಯಿಂದ ಪ್ರಸಾದದ ವ್ಯವಸ್ಥೆಯನ್ನು ಮಾಡಿಸಿದ್ದರು.
- **ನಿರೂಪಣೆ:** ಸಮಗ್ರ ಕಾರ್ಯಕ್ರಮದ ಉಸ್ತುವಾರಿಯನ್ನು ಹೊತ್ತು ವೆಂಕನಗೌಡ ಪಾಟೀಲ್ ಅವರು ಅಚ್ಚುಕಟ್ಟಾಗಿ ಕಾರ್ಯಕ್ರಮ ನಿರೂಪಿಸಿದರು.
- **ಭಕ್ತರ ಸಾಗರ:** ಗ್ರಾಮದ ಮಹಿಳೆಯರು ಮತ್ತು ಪುರುಷರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು, ಮಂತ್ರಘೋಷಗಳ ನಡುವೆ ಭಕ್ತಿಯಿಂದ ಮಿಂದೆದ್ದರು.

## ಯೋಜನೆಗಳಿಗೆ ಹಣಕಾಸು ಕೊರತೆ ಇಲ್ಲ

ನೈಜ್ಯ ದೆಸೆ ನ್ಯೂಸ್

**ವೈದ್ಯಕಿಯ ಶಿಕ್ಷಣ ಇಲಾಖೆ ಅಡಿಯಲ್ಲಿ ನಡೆಯುತ್ತಿರುವ ಮೆಡಿಕಲ್ ಕಾಲೇಜು, ಆಸ್ಪತ್ರೆ ಸೇರಿ ಯಾವುದೇ ಕಾಮಗಾರಿಗೆ ಹಣ–ಕಾಸಿನ ತೊಂದರೆ ಇಲ್ಲ ಎಂದು ವೈದ್ಯಕಿಯ ಶಿಕ್ಷಣ ಇಲಾಖೆ ಸಚಿವ ಡಾ.ಶರಣಪ್ರಕಾಶ ಪಾಟೀಲ್ ಸ್ಪಷ್ಟಪಡಿಸಿದರು. ಕಲಬುರಗಿ ಜಿಮ್ಸ್ ಸೇರಿ ವಿವಿಧ ಆಸ್ಪತ್ರೆ ಕಟ್ಟಡ ಕಾಮಗಾರಿ ಪರಿಶೀಲಿಸಿದ ಬಳಿಕ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಲಬುರಗಿ ಸೇರಿ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಇಲಾಖೆ ಅಡಿ ಅನೇಕ ಆಸ್ಪತ್ರೆಗಳು, ಮೆಡಿಕಲ್ ಕಾಲೇಜುಗಳ ಕಟ್ಟಡ ಕಾಮಗಾರಿ ಶುರುವಾಗಿವೆ.**



ಯಾವುದಕ್ಕೂ ಹಣಕಾಸಿನ ತೊಂದರೆ ಎದುರಾಗಿಲ್ಲ. ಎಲ್ಲವೂ ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳುತ್ತಿವೆ ಎಂದು ಹೇಳಿದರು. ಜಿಲ್ಲೆಗೊಂದು ಮೆಡಿಕಲ್ ಕಾಲೇಜುರಾಜ್ಯದ ಪ್ರತಿ ಜಿಲ್ಲೆಗೊಂದು ಸರ್ಕಾರಿ ವೈದ್ಯಕಿಯ ಕಾಲೇಜು ಪ್ರಾರಂಭಿಸಲು ಯೋಜಿಸಲಾಗಿದ್ದು, ಈಗಾಗಲೇ 22 ಜಿಲ್ಲೆಗಳಲ್ಲಿ ಕಾಲೇಜು ಪ್ರಾರಂಭವಾಗಿವೆ. ವಿಜಯಪುರ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಪ್ರಾರಂಭವಾಗಲಿವೆ. ಕಾರವಾರ, ಹಾವೇರಿ, ಗದಗ ಜಿಲ್ಲೆಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಬೀದರ್, ರಾಯಚೂರು ಜಿಲ್ಲೆಗಳಲ್ಲಿ ಕ್ಯಾನ್ಸರ್ ಆಸ್ಪತ್ರೆ ಕಟ್ಟಡ ಶುರುವಾಗಿದೆ. ಮಂಡ್ಯ, ತುಮಕೂರು ಉದ್ಘಾಟನೆಗೊಂಡಿವೆ. ಶಿವಮೊಗ್ಗ, ಮೈಸೂರು ಆರು ತಿಂಗಳಲ್ಲಿ ಉದ್ಘಾಟನೆಗೊಳ್ಳಲಿವೆ. ಬೆಳಗಾವಿ ಜಿಲ್ಲೆಯಲ್ಲಿ ಅಡಿಗಲ್ಲು ಹಂತದಲ್ಲಿದೆ. ಚಾಮರಾಜನಗರ, ಕೊಡುಗು ಜಿಲ್ಲೆ ಸೇರಿ ಕೆಲ ಕಡೆ ಪ್ರಸ್ತಾವನೆ ಹಂತದಲ್ಲಿವೆ ಎಂದು ವಿವರಿಸಿದರು. ಕ್ರಿಟಿಕೇರ್ ಯುನಿಟ್ ಕಲಬುರಗಿ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಪ್ರಸಕ್ತ 90 ಹಾಸಿಗೆ ವ್ಯವಸ್ಥೆ ಇದ್ದು, ಇನ್ನೂ 200 ಹಾಸಿಗೆ ಸೇರಿ 300 ಬೆಡ್ ಆಸ್ಪತ್ರೆ ಮಾಡಲಾಗುತ್ತಿದ್ದು, ಕಾಮಗಾರಿ ನಡೆದಿದೆ. ಅಕ್ಟೋಬರ್‌ನಲ್ಲಿ ಪೂರ್ಣಗೊಳ್ಳಲಿವೆ. 50 ಬೆಡ್ ಸಾಮರ್ಥ್ಯದ ಕ್ರಿಟಿಕಲ್ ಕೇರ್ ಯುನಿಟ್ ಕಾಮಗಾರಿ ಅಕ್ಟೋಬರ್‌ನಲ್ಲಿ ಮುಗಿಯಲಿದೆ. 200 ಹಾಸಿಗೆ ಸಾಮರ್ಥ್ಯದ ತಾಯಿ ಮಕ್ಕಳ ಆಸ್ಪತ್ರೆ ಕಾಮಗಾರಿ ಅಕ್ಟೋಬರ್‌ರೆಗೆ ಪೂರ್ಣಗೊಳ್ಳಲಿದೆ. ಜಿಮ್ಸ್ ಆಸ್ಪತ್ರೆ ಆವರಣದಲ್ಲೇ ನಾಲ್ಕು ಆಸ್ಪತ್ರೆಗಳು ನಡೆಯುತ್ತಿವೆ ಎಂದು ವಿವರಿಸಿದರು. ಬಹುಕೌಶಲ ಅಭಿವೃದ್ಧಿ ಕೇಂದ್ರ ಗುಲ್ಬರ್ಗ ವಿಶ್ವವಿದ್ಯಾಲಯದ ಬಳಿ 10 ಎಕರೆ ಪ್ರದೇಶದಲ್ಲಿ 150 ಬೆಡ್ ಸಾಮರ್ಥ್ಯದ ಮಕ್ಕಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ತಲೆಎತ್ತಲಿದೆ. 100 ಹಾಸಿಗೆ ಸಾಮರ್ಥ್ಯದ ನಿಮಾನ್ಸ್ ಆಸ್ಪತ್ರೆ ನಿರ್ಮಾಣಕ್ಕೆ ಈಗಾಗಲೇ ಟೆಂಡರ್ ಆಗಿದೆ. ವಿಶ್ವವಿದ್ಯಾಲಯ 25 ಎಕರೆ ಪ್ರದೇಶದಲ್ಲಿ ಬಹುಕೌಶಲ ಅಭಿವೃದ್ಧಿ ಕೇಂದ್ರ ಸ್ಥಾಪಿಸಲಾಗುತ್ತಿದೆ. ಈಗಿರುವ ಐಟಿಐ ಕಾಲೇಜು ಕಟ್ಟಡ ಸಂಪೂರ್ಣ ಹಳೆಯದಾಗಿದ್ದು, ಹೊಸ ಕಾಲೇಜು ನಿರ್ಮಾಣ ಮಾಡಲಾಗುತ್ತಿದೆ. ಪ್ರತಿ ಜಿಲ್ಲೆಗೊಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಪ್ರತಿ ವಿಭಾಗಕ್ಕೊಂದು ಜಯದೇವ ಆಸ್ಪತ್ರೆ ನಿರ್ಮಾಣ ಮಾಡಲಾಗುತ್ತಿದೆ. ಕಲಬುರಗಿ, ಮೈಸೂರು, ಹುಬ್ಬಳ್ಳಿ, ಬಳ್ಳಾರಿ, ಬೆಳಗಾವಿ, ಚಿಕ್ಕಮಂಗಳೂರು ಜಿಲ್ಲೆಗಳಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿವೆ. ಕಲಬುರಗಿ, ರಾಯಚೂರು, ಬಳ್ಳಾರಿ, ಮೈಸೂರು, ಬೆಳಗಾವಿಯಲ್ಲಿ ಟ್ರಾಮಾ ಸೆಂಟರ್‌ಗಳು ಕಾರ್ಯನಿರ್ವಹಿಸುತ್ತಿವೆ. ಬಡವರು, ಜನಸಾಮಾನ್ಯರ ಆರೋಗ್ಯ ಸಮಸ್ಯೆಗಳಿಗೆ ಸ್ಪಂದಿಸಲು ನಮ್ಮ ಸರ್ಕಾರ ಇಷ್ಟೊಂದು ಪ್ರಮಾಣದಲ್ಲಿ ಆರೋಗ್ಯ ಕ್ಷೇತ್ರಕ್ಕೆ ಒತ್ತು ನೀಡಿದೆ.

## ಚಿಕಲಪರ್ವಿಯಲ್ಲಿ ಆರೋಗ್ಯ ಉಪಕೇಂದ್ರ ಪಾಳು :ತಹಶೀಲ್ದಾರರಿಗೆ ದಲಿತ ಸೇನೆಯಿಂದ ಮನವಿ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲೂಕಿನ ಚಿಕಲಪರ್ವಿ ಗ್ರಾಮದಲ್ಲಿ ಕೆ.ಕೆ.ಆರ್.ಡಿ.ಬಿ. (ಮೈಕ್ರೋ) ಯೋಜನೆಯಡಿ ನಿರ್ಮಿಸಲಾದ ಆರೋಗ್ಯ ಉಪಕೇಂದ್ರ ಮತ್ತು ಆರೋಗ್ಯ & ಕ್ಷೇಮ ಕೇಂದ್ರ ಕಾರ್ಯನಿರ್ವಹಿಸದೇ ಪಾಳು ಬಿದ್ದಿರುವ ಹಿನ್ನೆಲೆಯಲ್ಲಿ ದಲಿತ ಸೇನೆಯ ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷರಾದ ತಾಜುದ್ದೀನ್ ಚಿಕಲಪರ್ವಿ ಅವರು ಮಾನ್ವಿ ತಹಶೀಲ್ದಾರರ ಕಚೇರಿಯಲ್ಲಿ ಗ್ರೇಡ್ 2 ತಹಶೀಲ್ದಾರರಾದ ಅಬ್ದುಲ್ ವಾಹಿದ್ ಅವ–ರಿಗೆ ಮನವಿ ಪತ್ರ ಸಲ್ಲಿಸಿ ಮಾತನಾಡಿದರು.**



ಈ ಸಂದರ್ಭದಲ್ಲಿ ಮಾತನಾಡಿದ ಅವರು, ಗರ್ಭಿಣಿಯರಿಗೆ ಸೂಕ್ತ ಚಿಕಿತ್ಸೆ ಹಾಗೂ ಸುರಕ್ಷಿತ ಹೆರಿಗೆ ನೀಡುವ ಉದ್ದೇಶದಿಂದ ನಿರ್ಮಿಸಲಾದ ಆರೋಗ್ಯ ಕೇಂದ್ರ ಉದ್ಘಾಟನೆಯಾದ ಕೆಲವೇ ದಿನಗಳಲ್ಲಿ ಕಾರ್ಯನಿರ್ವಹಣೆ ನಿಲ್ಲಿಸಿ ನಿರ್ಲಕ್ಷ್ಯಕ್ಕೊಳಗಾಗಿದೆ. ಇದರಿಂದ ಕಟ್ಟಡ ಪಾಳು ಬಿದ್ದಿದ್ದು, ಸ್ಥಳೀಯರು ಮಲಮೂತ್ರ ವಿಸರ್ಜನೆ ಮಾಡುವ ಸ್ಥಳವಾಗಿದ್ದು, ಆಸ್ಪತ್ರೆಯಲ್ಲಿದ್ದ ಕೆಲವು ಪರಿಕರಗಳು, ವಿದ್ಯುತ್ ಮತ್ತು ಸೋಲಾರ್ ಸಾಮಾಗ್ರಿಗಳು ಕಳುವಾಗಿರುವುದು ವಿಷಾದನೀಯ ಎಂದು ಹೇಳಿದರು.

ಆರೋಗ್ಯ ಕೇಂದ್ರ ಕಾರ್ಯನಿರ್ವಹಿಸದ ಕಾರಣ ಗರ್ಭಿಣಿಯರು, ಹಿರಿಯ ನಾಗರಿಕರು ಹಾಗೂ ಸ್ಥಳೀಯ ರೋಗಿಗಳು ಸಮೀಪದಲ್ಲೇ ಚಿಕಿತ್ಸೆ ಪಡೆಯಲು ಸಾಧ್ಯವಾಗದೆ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಆರೋಗ್ಯ ಉಪಕೇಂದ್ರ ಮತ್ತು ಆರೋಗ್ಯ & ಕ್ಷೇಮ ಕೇಂದ್ರವನ್ನು ಮರುಪ್ರಾರಂಭಿಸಿ ಕಟ್ಟಡದ ರಕ್ಷಣೆಗಾಗಿ ಸೂಕ್ತ ಕ್ರಮ ಕೈಗೊಳ್ಳುವಂತೆ ಅವರು ತಹಶೀಲ್ದಾರರಿಗೆ ಮನವಿ ಮಾಡಿದರು.

## ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದಿಂದ ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಇಲ್ಲಿನ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದಿಂದ 2025–26ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿ–ಜನ ಉಪಯೋಜನೆ ಅಡಿಯಲ್ಲಿ (10+1) ಕುರಿ/ಮೇಕೆ ಘಟಕ ಯೋಜನೆಯನ್ನು ಅನುಷ್ಠಾನಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.**

ಜಿಲ್ಲೆಗೆ 45 ಗುರಿಗಳು (ಪರಿಶಿಷ್ಟ ಜಾತಿ–23, ಪರಿಶಿಷ್ಟ ಪಂಗಡ–22) ಸರ್ಕಾರದ ಮಾರ್ಗಸೂಚಿಗಳಂತೆ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಫಲಾನುಭವಿಗಳ ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಲಾಗುವುದು. ಹಾಗೂ ಈ ಯೋಜನೆಯ ಗ್ರಾಮೀಣ ಭಾಗದ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಕೂಲಿ ಕಾರ್ಮಿಕರು, ಕೃಷಿ ಕಾರ್ಮಿಕರು, ಮತ್ತು ಪಶು ಸಂಗೋಪನೆಯಲ್ಲಿ ತೊಡಗಿಕೊಂಡ ಆಸಕ್ತ ಮತ್ತು ಅರ್ಹ ಅಭ್ಯಾರ್ಥಿಗಳು, ಸಂಬಂಧಿಸಿದ ತಾಲ್ಲೂಕಿನ ಸಹಾಯಕ ನಿರ್ದೇಶಕರು ಮುಖ್ಯ ಪಶುವೈದ್ಯಾಧಿಕಾರಿಗಳು ಪಶು ಆಸ್ಪತ್ರೆ ಪಶು ಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರನ್ನು ಸಂಪರ್ಕಿಸಿ ನಿಗದಿತ ಅರ್ಜಿ ನಮೂನೆಯನ್ನು ಪಡೆದು ಮಾರ್ಚ್ 11ರೊಳಗಾಗಿ ಅರ್ಜಿಯನ್ನು ದ್ವಿಪ್ರತಿಯಲ್ಲಿ ಅದೇ ಕಚೇರಿಯಲ್ಲಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕಿನ ಸಹಾಯಕ ನಿರ್ದೇಶಕರು/ಮುಖ್ಯ ಪಶುವೈದ್ಯಾಧಿಕಾರಿಗಳು ಪಶು ಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಹಾಗೂ ಸಹಾಯಕ ನಿರ್ದೇಶಕರ ಕಚೇರಿ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ರಾಯಚೂರು ಇವರನ್ನು ಸಂಪರ್ಕಿಸುವಂತೆ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಕ್ಕಳಿಗೆ ನೈತಿಕ ಮೌಲ್ಯಗಳನ್ನು ತಿಳಿಸಿ ಕೊಡಿ: ಸಾಹಿತಿ ಹಂಚಲಿ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಇತ್ತೀಚಿನ ದಿನಗಳಲ್ಲಿ ಮಕ್ಕಳಲ್ಲಿ ಸಂಸ್ಕಾರ ಹಾಗೂ ಮಾನವೀಯ ಮೌಲ್ಯಗಳು ಕಡಿಮೆ ಆಗುತ್ತಿವೆ ಇದು ಕಳವಳಕಾರಿ ಸಂಗತಿಯಾಗಿದೆ ಇದರ ಕುರಿತು ಎಲ್ಲರೂ ಚಿಂತಿಸುವ ಅಗತ್ಯ ಇದೆ ಎಂದು ಶಿಕ್ಷಕ ಸಾಹಿತಿ ಅಶೋಕ ಹಂಚಲಿ ಹೇಳಿದರು. ತಾಲೂಕಿನ ಹಿರೂರ ಗ್ರಾಮದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ ಇದರ 7ನೇ ವರ್ಗದ ವಿದ್ಯಾರ್ಥಿಗಳ ಬೀಳ್ಕೊಡುವ ಹಾಗೂ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಬುಧವಾರ ಅವರು ಮಾತನಾಡಿದರು.**




ಇವತ್ತು ಮಕ್ಕಳಿಗೆ ಗುಣಮಟ್ಟದ ಶಿಕ್ಷಣದೊಂದಿಗೆ ಒಳ್ಳೆಯ ಸಂಸ್ಕಾರಗಳನ್ನೂ ಕೊಡಬೇಕಾಗಿದೆ ಇದರಲ್ಲಿ ಪಾಲಕರ ಜವಾಬ್ದಾರಿ ಹೆಚ್ಚಿಗಿದೆ ಮಕ್ಕಳನ್ನು ಮೊಬೈಲ್ ದಾಸರಾಗದಂತೆ ನೋಡಿಕೊಳ್ಳಲು ಸ್ವತಃ ಪಾಲಕರು ಅವರ ಮುಂದೆ ಮೊಬೈಲ್ ಬಳಕೆ ಕಡಿಮೆ ಮಾಡಬೇಕು.ಮಗು ಹೆತ್ತವರನ್ನು ಅನುಸರಿಸುತ್ತದೆ ಎಲ್ಲರೂ ಪೂರಕವಾಗಿ ಕೆಲಸ ಮಾಡಿದಾಗ ಮಾತ್ರ ಮಕ್ಕಳ ಉಜ್ವಲ ಭವಿಷ್ಯವನ್ನು ನಿರ್ಮಾಣ ಮಾಡಲು ಸಾಧ್ಯ. ಸರ್ಕಾರಿ ಶಾಲೆಯಲ್ಲಿ ಇಂತಹದೊಂದು ಅದ್ಭುತ ಕಾರ್ಯಕ್ರಮ ಮಾಡಿರುವುದಕ್ಕೆ ಎಸ್ ಡಿ ಎಮ್ ಸಿ ಅಧ್ಯಕ್ಷರು ಹಾಗೂ ಶಿಕ್ಷಕ ವರ್ಗಕ್ಕೆ ಅಭಿನಂದಿಸುತ್ತೇನೆ ಎಂದರು.

ಕ್ಷೇತ್ರ ಸಮನ್ವಯಾಧಿಕಾರಿ ಆರ್ ಬಿ ದಮ್ಮೂರ ಮಠ ಮಾತನಾಡಿ ಇಂದು ಸರ್ಕಾರಿ ಶಾಲೆಗಳು ಖಾಸಗಿ ಶಿಕ್ಷಣ ಸಂಸ್ಥೆಗಳೊಂದಿಗೆ ಪೈಪೋಟಿ ನಡೆಸುವಷ್ಟು ಸಶಕ್ತವಾಗಿವೆ, ದೇಶದಲ್ಲಿ ದೊಡ್ಡ ಸಾಧನೆಗಳನ್ನು ಮಾಡಿದವರಲ್ಲಿ ಅತಿ ಹೆಚ್ಚು ಸರ್ಕಾರಿ ಶಾಲೆಗಳಿಂದಲೇ ಹೊರಹೊಮ್ಮಿದವರು, ಇವುಗಳ ರಕ್ಷಣೆ ಹಾಗೂ ಬೆಳವಣಿಗೆಗೆ ಎಲ್ಲರೂ ಕೈಜೋಡಿಸಬೇಕಾಗಿದೆ ಎಂದರು. ಸಿಆರ್‌ಪಿ ಎಸ್ ಎಸ್ ಯಾಳವಾರ ಪ್ರಸ್ತಾವಿಕವಾಗಿ ಮಾತನಾಡಿದರು. ಸಮಾರಂಭದ ಸಾನಿಧ್ಯ ವಹಿಸಿದ್ದ ವೇ.ಮೂ. ಸಿ.ಎಸ್.ಹಿರೇಮಠ ಆಶೀರ್ವಚನ ನೀಡಿದರು.

ಎಸ್ ಡಿ ಎಂ ಸಿ ಅಧ್ಯಕ್ಷ ಸಂಗನಗೌಡ ಅಸ್ಕಿ ಅಧ್ಯಕ್ಷತೆ ವಹಿಸಿ ಮಾತನಾಡಿ ಶಾಲೆಯ ಅಭಿವೃದ್ಧಿಗೆ ಶಕ್ತಿಮೀರಿ ಪ್ರಯತ್ನಿಸಿದ್ದೇನೆ ಇದಕ್ಕೆ ನಮ್ಮ ಸಮಿತಿಯ ಎಲ್ಲ ಸದಸ್ಯರ ಹಾಗೂ ಶಿಕ್ಷಕರ ಸಹಕಾರವೂ ಇದೆ ಎಂದರು. ಇದೇ ಸಂದರ್ಭದಲ್ಲಿ ವಿವಿಧ ಕ್ರೀಡೆ ಹಾಗೂ ಸ್ಪರ್ಧೆಗಳಲ್ಲಿ ಭಾಗವಹಿಸಿ ಉತ್ತಮ ಸಾಧನೆ ತೋ–ರಿದ ಮಕ್ಕಳನ್ನು ಸನ್ಮಾನಿಸಿ ಪ್ರೋತ್ಸಾಹಿಸಲಾಯಿತು. ಜಿ.ಪಿ.ಟಿ.ತಾಲೂಕಾಧ್ಯಕ್ಷ ಎನ್.ಎಸ್. ನೀರಲಗಿ,ಶಿಕ್ಷಕಿ ಜಿ.ಎಸ್.ಮದ್ದರಕಿ ಕಾರ್ಯಕ್ರಮ ನಿರ್ವಹಿಸಿದರು. ಕೆ.ಎಸ್. ಪಿ.ಎಸ್.ಟಿ.ಎ.ತಾಲೂಕ ಘಟಕದ ಅಧ್ಯಕ್ಷ ಬಿ.ಟಿ. ವಜ್ಜಲ, ಪ್ರಧಾನ ಕಾರ್ಯದರ್ಶಿ ಎಸ್.ಬಿ.ಬೀರಗೊಂಡ, ಗ್ರಾ.ಪಂ. ಕಾರ್ಯದರ್ಶಿ ಬಿರಾದಾರ, ಗುರಣ್ಣ ಚೌದರಿ, ಮಾನಪ್ಪ ಬಡಿಗೇರ,ಬಿ.ಆರ್.ಸಿ.ಕಾಶಿನಾಥ ಸಜ್ಜನ,ಸಿ.ಆರ್.ಸಿ. ರಾಜು ವಿಜಾಪುರ, ಪ್ರಾ.ಶಾ.ಶಿ.ಸ.ಸಂ.ಉಪಾಧ್ಯಕ್ಷ ಪಿ. ವೈ.ಚಲವಾದಿ, ಮು.ಗು.ಎಲ್.ಎಸ್.ಗಸ್ತಿ, ಸಹ ಶಿಕ್ಷಕ ಎಸ್ ಬಿ ಹಡಪದ, ಶಿಕ್ಷಕರಾದ ದಿನೇಶರ ಯರಲಡ್ಡಿ, ಎನ್‌ಎಸ್ ನೀರಲಗಿ, ಶಿಕ್ಷಕಿಯರಾದ ಜಿ.ಎಸ್.ಮದ್ದರಕಿ,ಎಂ.ಜಿ. ಬಿರಾದಾರ, ಶಿಕ್ಷಕ ವರ್ಗ,ಪಾಲಕರು ಹಾಗೂ ವಿದ್ಯಾರ್ಥಿಗಳು ಇದ್ದರು. ವೇದಿಕೆ ಕಾರ್ಯಕ್ರಮದ ನಂತರ ವಿದ್ಯಾರ್ಥಿಗಳ ಸಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

## ಶಿಕ್ಷಣ, ಉದ್ಯೋಗ ಕೌಶಲ್ಯಾಭಿವೃದ್ಧಿ ಹಾಗೂ ಮೂಲಭೂತ ಸೌಕರ್ಯಗಳನ್ನು ಬಲಪಡಿಸುವುದು ನಮ್ಮ ಸಂಸ್ಥೆಯ ಗುರಿ: ಶಿವಧರ್ ದುಬೆ

ನೈಜ್ಯ ದೆಸೆ ನ್ಯೂಸ್

**ಆಲಂದ: ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಬ್ಲುಪೈನ್ ಎನರ್ಜಿ ಸಂಸ್ಥೆಯು ವ್ಯಾಪಕ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (CSR) ಚಟುವಟಿಕೆಗಳನ್ನು ಆಯೋಜಿಸಿತು. ಈ ಯೋಜನೆಗಳ ಉದ್ದೇಶವು ಗ್ರಾಮೀಣ ಸಮುದಾಯಗಳಲ್ಲಿ ಸ್ವಚ್ಛ ಕುಡಿಯುವ ನೀರು, ಶಿಕ್ಷಣ, ಉದ್ಯೋಗ ಕೌಶಲ್ಯಾಭಿವೃದ್ಧಿ ಹಾಗೂ ಮೂಲಭೂತ ಸೌಕರ್ಯಗಳನ್ನು ಬಲಪಡಿಸುವುದು ನಮ್ಮ ಸಂಸ್ಥೆಯ ಹಾಗೂ (ಕಖಖಆ) ಫೌಂಡೇಶನ್ ಗುರಿಯಾಗಿದೆ ಎಂದು ಸಂಸ್ಥೆಯ ನಿರ್ದೇಶಕರಾದ ಶ್ರೀ ಶಿವಧರ್ ದುಬೆ ಅವರು ತಿಳಿಸಿದರು.**



ನಂತರದಲ್ಲಿ ಸಂಸ್ಥೆಯ ಮುಖ್ಯ ಸಸ್ಟೇನಬಿಲಿಟಿ ಅಧಿಕಾರಿ ಸುಮಿತ್ ಬರಾಟ್ ಮಾತನಾಡಿ ಬ್ಲುಪೈನ್ ಎನರ್ಜಿ ಸಂಸ್ಥೆಯು ಶುದ್ಧ ಕುಡಿಯುವ ನೀರು ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ತರಬೇತಿ ನೀಡಲು ಗ್ರಾಮೀಣ ಸಮುದಾಯ ಸಬಲೀಕರಣಕ್ಕೆ ಹಾಗೂ ಗ್ರಾಮೀಣ ಪ್ರದೇಶದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಜೊತೆಗೆ ತರಬೇತಿ ಕೇಂದ್ರಗಳಲ್ಲಿ ಸೌರ ಪ್ಯಾನಲ್ ಸ್ಥಾಪನೆಗೆ ಸಂಬಂಧಿಸಿದ ಉಚಿತ ಆರು ತಿಂಗಳ ತರಬೇತಿ ನೀಡಲಾಗುತ್ತದೆ. ಈ ತರಬೇತಿಯಿಂದ ಕೌಶಲ್ಯಾಭಿವೃದ್ಧಿ ಕೇಂದ್ರಗಳಿಂದ 60 ವಿದ್ಯಾರ್ಥಿಗಳಿಗೆ ಪ್ರಯೋಜನವಾಗಲಿದೆ. ಅದರಲ್ಲಿ 50% ವಿದ್ಯಾರ್ಥಿನಿಯರು ಭಾಗವಹಿಸುವ ಮೂಲಕ ಲಿಂಗಸಮಾನತೆಯನ್ನು ಉತ್ತೇಜಿಸಲಾಗುತ್ತದೆ. ಇದರಿಂದ ಸ್ಥಳೀಯ ಯುವಕರಿಗೆ ತಾಂತ್ರಿಕ ಕೌಶಲ್ಯ ಮತ್ತು ಉದ್ಯೋಗಾವಕಾಶ ವೃದ್ಧಿಯಾಗಿದೆ.

ಈ ನಮ್ಮ ಸಂಸ್ಥೆ ಮುಖ್ಯ ಉದ್ದೇಶ ಆಗಿರುತ್ತದೆ ಈಗಾಗಿ ಅಂಬೇವಾಡ್,ಚಿಂಚೋಳಿ ಹಾಗೂ ಜಾಮಗಾ ಜೆ ಗ್ರಾಮಗಳಲ್ಲಿ RO ನೀರು ಶುದ್ಧೀಕರಣ ಘಟಕ ಮತ್ತು ಮೊಗಾ ಬಿ ಗ್ರಾಮದಲ್ಲಿ ತರಬೇತಿ ಕೇಂದ್ರ ,ಜಿದಗಾ ಗ್ರಾಮದಲ್ಲಿ ಸೌರಶಕ್ತಿ ಬೀದಿ ದೀಪಗಳನ್ನು ಅಳವಡಿಸಲಾಯಿತು. ಹಾಗೂ ಸರಸಾಂಬಾ ಗ್ರಾಮದಲ್ಲಿ ಮಿನಿ ಸೈನ್ಸ್ ಸೆಂಟರ್ ಮತ್ತು ಖಔ ನೀರು ಶುದ್ಧೀಕರಣ ಘಟಕ ಹಾಗೂ ಸ್ಮಶಾನ ಭೂಮಿ ಹಾಗೂ ಹಿರೋಳಿ ಗ್ರಾಮದಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಗ್ರಾಮಸ್ಥರಿಗೆ ಪ್ರಯೋಜನಕ್ಕಾಗಿ ಮಿನಿ ಸೈನ್ಸ್ ಸೆಂಟರ್ ಹಾಗೂ ಮಿನಿ ಬಸ್ ನಿಲ್ದಾಣ ನಿರ್ಮಿಸಲಾಯಿತು ಎಂದು ತಿಳಿಸಿದರು.






ಹಿರಿಯ ವ್ಯವಸ್ಥಾಪಕಿ ಸುಶ್ರೀ ಸುಚಿತ್ರಾ ಬಿಸೇನ್ ಮಾತನಾಡಿ ಈ ಯೋಜನೆಗಳು ಸ್ಥಳೀಯ ಸಮುದಾಯಕ್ಕೆ ದೀರ್ಘಕಾಲಿಕ ಪ್ರಯೋಜನ ಒದಗಿಸುವ ಉದ್ದೇಶದಿಂದ ರೂಪಿಸಲಾಗಿದೆ. ಹಾಗೂ ಮಿನಿ ಸೈನ್ಸ್ ಸೆಂಟರ್ ಮತ್ತು ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳು ಮಕ್ಕಳ ಮತ್ತು ಯುವಕರ ಭವಿಷ್ಯವನ್ನು ಬಲಪಡಿಸುತ್ತೇವೆ ಸ್ಥಳೀಯ ಸಮುದಾಯ ಗ್ರಾಮಸ್ಥರು ಸಹಕಾರ ಅಭಿವೃದ್ಧಿ ಕಾರ್ಯಕ್ರಮಕ್ಕೆ ಸಮುದಾಯ ಭಾಗವಹಿಸಿಕ ಅಗತ್ಯವೆಂದು ಮತ್ತು ಸಂಸ್ಥೆಯ ಸದಸ್ಯರು ಬ್ಲುಪೈನ್ ಎನರ್ಜಿ ಹಾಗೂ ಕಖಖಆ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ ವಿವಿಧ ಕಾರ್ಯಕ್ರಮಗಳು ಮೂಲ ಸೌಕರ್ಯ ಕಲ್ಪಿಸಲು ಮಹತ್ವದ ಪಾತ್ರ ವಹಿಸಿದೆ ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಬ್ಲುಪೈನ್ ಎನರ್ಜಿ ದೆಹಲಿ ಮುಖ್ಯ ಸಸ್ಟೇನಬಿಲಿಟಿ ಅಧಿಕಾರಿ ಶ್ರೀ ಸುಮಿತ್ ಬರಾಟ್, ಹಿರಿಯ ವ್ಯವಸ್ಥಾಪಕಿ ಸಾಮಾಜಿಕ ಮತ್ತು ಸಸ್ಟೇನಬಿಲಿಟಿ ಸುಶ್ರೀ ಸುಚಿತ್ರಾ ಬಿಸೇನ್, ವ್ಯವಸ್ಥಾಪಕಿ ? ಸಂವಹನ ವಿಭಾಗ ಸುಶ್ರೀ ಅಂಜಲಿ ಬಾವಾ,ಹಾಗೂ ಫೀಲ್ಡ್ ಕೋಆರ್ಡಿನೇಟ–ರ್‌ಗಳಾದ ಶ್ರೀ ಪವನ್ ಮತ್ತು ಶ್ರೀ ಆಶುತೋಷ್ ಸಿಂಗ್, ಸ್ಥಳೀಯ ಯೋಜನಾ ತಂಡದ ಸದಸ್ಯರಾದ ಶ್ರೀ ಅಮರನಾಥ್,ಸೋಲಾರ್ ಸೈಟ್ ಮ್ಯಾನೇಜರ್ ಮತ್ತು ಶ್ರೀ ವಿಜಯ್ ಶ್ರೀವಾಸ್ತವ್ (ವಿಂಡ್ ಸೈಟ್ ಮ್ಯಾನೇಜರ್) ಸೇರಿದಂತೆ ಇತರ ಸಿಬ್ಬಂದಿ, ಹಾಗೂ ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಸಿಬ್ಬಂದಿಗಳು ಮತ್ತು ಸಾರ್ವಜನಿಕರು ಪಾಲ್ಗೊಂಡಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಏರೋನಾಟಿಕಲ್ ಇಂಜಿನಿಯರಿಂಗ್

ಏರೋನಾಟಿಕಲ್ ಇಂಜಿನಿಯರಿಂಗ್ (Aeronautical Engineering) ಎಂಬುದು ವಿಮಾನಗಳು, ಹೆಲಿಕಾಪ್ಟರ್‌ಗಳು ಮತ್ತು ಡ್ರೋನ್‌ಗಳ ವಿನ್ಯಾಸ, ಅಭಿವೃದ್ಧಿ, ಪರೀಕ್ಷೆ ಮತ್ತು ನಿರ್ವಹಣೆಯನ್ನು ಒಳಗೊಂಡ 4 ವರ್ಷಗಳ ಬಿ.ಇ/ಬಿ.ಟೆಕ್ ಪದವಿ ಕೋರ್ಸ್ ಆಗಿದೆ. ಇದು ವಾಯುಬಲವಿಜ್ಞಾನ (Aerodynamics) ಮತ್ತು ರಚನಾತ್ಮಕ ವಿಶ್ಲೇಷಣೆಯ ಮೇಲೆ ಕೇಂದ್ರೀಕರಿಸುತ್ತದೆ. 12ನೇ ತರಗತಿಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತ (PCM) ಕಡ್ಡಾಯ. ಏರೋನಾಟಿಕಲ್ ಇಂಜಿನಿಯರಿಂಗ್ ಕೋರ್ಸ್ ವಿವರಗಳು: ಅವಧಿ: 4 ವರ್ಷಗಳು (8 ಸೆಮಿಸ್ಟರ್‌ಗಳು). ಅರ್ಹತೆ: 10+2 (PUC) ನಲ್ಲಿ PCM ವಿಷಯಗಳೊಂದಿಗೆ ಕನಿಷ್ಠ 50–60% ಅಂಕಗಳು. ಪ್ರವೇಶ ಪರೀಕ್ಷೆಗಳು: JEE Main, KCET, AME CET. ಮುಖ್ಯ ವಿಷಯಗಳು: ಏರೋಡೈನಾಮಿಕ್ಸ್, ವಿಮಾನ ರಚನೆ (Aircraft Structures), ಪ್ರೊಪಲ್ಷನ್ ಸಿಸ್ಟಮ್ಸ್, ಏವಿಯಾನಿಕ್ಸ್ (Avionics), ಮತ್ತು ಫ್ಲೈಟ್ ಮೆಕ್ಯಾನಿಕ್ಸ್. ಉದ್ಯೋಗಾವಕಾಶಗಳು: ವಿಮಾನಯಾನ ಸಂಸ್ಥೆಗಳು (Airlines), HAL, DRDO, ಇಸ್ರೋ (ISRO), ರಕ್ಷಣಾ ಇಲಾಖೆ, ಮತ್ತು ಖಾಸಗಿ ಏರೋಸ್ಪೇಸ್ ಕಂಪನಿಗಳು ವಾಯುಯಾನ ಎಂಜಿನಿಯರಿಂಗ್ ಎಂಬುದು ಭೂಮಿಯ ವಾತಾವರಣದಲ್ಲಿರುವ ವಿಮಾನಗಳು ಮತ್ತು ಬಾಹ್ಯಾಕಾಶ ನೌಕೆಗಳ ಸಂಶೋಧನೆ, ವಿನ್ಯಾಸ, ಅಭಿವೃದ್ಧಿ, ನಿರ್ಮಾಣ, ನಿರ್ವಹಣೆಯನ್ನು ಒಳಗೊಂಡಿರುವ ಅಧ್ಯಯನವಾಗಿದೆ. ಇದು ನಿಯಂತ್ರಣ ಮೇಲ್ಮೈಗಳು, ಲಿಫ್ಟ್, ಏರ್‌ಫಾಯಿಲ್ ಮತ್ತು ಡ್ರ್ಯಾಗ್‌ನಂತಹ ನಡವಳಿಕೆಗಳು ಮತ್ತು ಸಂಬಂಧಿತ ಅಂಶಗಳನ್ನು ಒಳಗೊಂಡಂತೆ ವಿಮಾನಗಳ ವಾಯುಬಲವೈಜ್ಞಾನಿಕ ಅಂಶಗಳ ತನಿಖೆಯನ್ನು ಸಹ ಒಳಗೊಂಡಿದೆ. ಏರೋನಾಟಿಕಲ್ ಏರೋಸ್ಪೇಸ್ ಎಂಜಿನಿಯರಿಂಗ್‌ನ ಒಂದು ಶಾಖೆಯಾಗಿದೆ. ವಾಯುಮಂಡಲದ ಒಳಗೆ ಮತ್ತು ಹೊರಗೆ ವಿವಿಧ ಅನ್ವಯಿಕೆಗಳಿಗಾಗಿ ಉಪಗ್ರಹ ಉಡಾವಣಾ ವಾಹನ, ರಕ್ಷಣಾ ಕ್ಷಿಪಣಿಗಳು ಮತ್ತು ಉಪಗ್ರಹಗಳ ವಿಮಾನ ಮತ್ತು ಬಾಹ್ಯಾಕಾಶ ನೌಕೆ ಉಡಾವಣೆಯ ಸಂಶೋಧನೆ, ವಿನ್ಯಾಸ ಮತ್ತು ಉತ್ಪಾದನೆಗೆ ಏರೋಸ್ಪೇಸ್ ಎಂಜಿನಿಯರ್‌ಗಳು ಜವಾಬ್ದಾರರಾಗಿರುತ್ತಾರೆ.

# ಆರೋಗ್ಯ ಸರ್ವ ಶ್ರೇಷ್ಠ ಸಂಪತ್ತು: ನಾವದಗಿ ಶ್ರೀ

**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟಿ: ಮನುಷ್ಯನ ಬಳಿ ಎಲ್ಲವೂ ಇದ್ದು ಒಳ್ಳೆಯ ಆರೋಗ್ಯ ಇಲ್ಲದೆ ಹೋದಲ್ಲಿ ಅವನು ಏನನ್ನೂ ಮಾಡಲು ಸಾಧ್ಯವಿಲ್ಲ. ಸಕಲ ಸಂಪತ್ತುಗಳಲ್ಲಿ ಆರೋಗ್ಯ ಶ್ರೇಷ್ಠ ಸಂಪತ್ತಾಗಿದೆ ಅದರ ಕುರಿತು ಹೆಚ್ಚು ಕಾಳಜಿ ವಹಿಸಿ ಎಂದು ನಾವದಗಿ ಬ್ರಹನ್ಮಠದ ಷ.ಬ್ರ.ರಾಜ ಗುರು ರಾಜೇಂದ್ರ ಒಡೆಯರ ಶಿವಾಚಾರ್ಯ ಮಹಾಸ್ವಾಮಿಗಳು ಸಲಹೆ ನೀಡಿದರು.**

ತಾಲೂಕಿನ ನಾವದಗಿ ಗ್ರಾಮ ಬ್ರಹನ್ಮಠದ ಗುರು ಪಟ್ಟಾಧಿಕಾರದ ದ್ವಿತೀಯ ವಾರ್ಷಿಕೋತ್ಸವ ಅಂಗವಾಗಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬುಧವಾರ ಹಮ್ಮಿಕೊಂಡ ಬೃಹತ್ ಉಚಿತ ಆರೋಗ್ಯ ಮತ್ತು ಶಸ್ತ್ರಚಿಕಿತ್ಸಾ ಶಿಬಿರದ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು. ಈ ಶಿಬಿರದಲ್ಲಿ ವಿವಿಧ ರೋಗಗಳಿಗೆ ಸಂಬಂಧಿಸಿ ತಜ್ಞ ವೈದ್ಯರು ಆಗಮಿಸಿದ್ದಾರೆ,



ಇದರ ಸದುಪಯೋಗವನ್ನು ನೀವು ಮಾಡಿಕೊಳ್ಳಿ ಇಂಥಹಾ ಶಿಬಿರಗಳಿಂದ ಗ್ರಾಮೀಣ ಭಾಗದ ಬಡವರಿಗೆ ಹೆಚ್ಚು ಅನುಕೂಲವಾಗುತ್ತದೆ ಎಂದರು.

ಡಾಕ್ಟರ್ ರುದ್ರಸ್ವಾಮಿ ಹಿರೇಮಠ ಮಾತನಾಡಿ ಕಳೆದ ಎರಡು ವರ್ಷಗಳಿಂದ ಇಂಥ ಶಿಬಿರುಗಗಳನ್ನು ಶ್ರೀಗಳು ಹಮ್ಮಿಕೊಳ್ಳುತ್ತಿದ್ದಾರೆ ಅವರ ಎಲ್ಲ ಸೇವಾ ಕಾರ್ಯಗಳಿಗೆ ಭಕ್ತರ ಸಂಪೂರ್ಣ ಸಹಕಾರವಿದೆ ಎಂದರು.ಇದೇ ಸಂದರ್ಭದಲ್ಲಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅನುಪಮ ಸೇವೆಯನ್ನು ಸಲ್ಲಿಸುತ್ತಿರುವ ಮುಖ್ಯ ಗುರುಮಾತೆ ಅಂಬಿಕಾ ಗೋಗಿ ಇವರನ್ನು ಶ್ರೀಮಠದಿಂದ ಗೌರವಿಸಲಾಯಿತು. ಉದ್ಘಾಟನಾ ಸಮಾರಂಭದಲ್ಲಿ ವೈದ್ಯರಾದ ಗುರುಲಿಂಗಯ್ಯ ಹಿರೇಮಠ, ಗುರುಮೂರ್ತಯ್ಯ ಹಿರೇಮಠ, ರುದ್ರಸ್ವಾಮಿ ಹಿರೇಮಠ,ಶ್ರೀದೇವಿ ಹಿರೇಮಠ, ಅನುಗ್ರಹ ಕಣ್ಣಿನ ಆಸ್ಪತ್ರೆಯ ಡಾ.ಕಾರ್ತಿಕ ವಿಜಾಪುರ, ಮಹಾಂತೇಶ ಹುಜರಾತಿ, ಡಾ.ಚಂದ್ರಶೇಖರ ನಾಗಲಿಕರ್ ಲಿಂಗಸೂಗೂರ, ಸಾಹಿತಿ ಬಸವರಾಜ ಗೊರಜಿ,

ಡಾ.ಶಿವರಾಜ ಒಡೆಯರ್, ಮುಖ್ಯ ಗುರು ಮಾತೆ ಅಂಬಿಕಾ ಗೋಗಿ, ಸಹ ಶಿಕ್ಷಕ ಸಿ.ಎ.ಯರಲಡ್ಡಿ, ಡಾ.ಆರೀಫ ಮನಿಯಾರ, ಶಾಂತಗೌಡ ಇಬ್ರಾಹಿಂಪೂರ ಹಾಗೂ ಅನುಗ್ರಹ ಕಣ್ಣಿನ ಆಸ್ಪತ್ರೆ ವಿಜಯಪುರ ಸಿಬ್ಬಂದಿಗಳು ಇದ್ದರು. ಶಿಬಿರದಲ್ಲಿ ಹೃದಯ ರೋಗ, ಮಧುಮೇಹ ರೋಗ, ಪಾರ್ಶ್ವ ವಾಯು, ಕಿಡ್ನಿ ಇತ್ಯಾದಿ 200 ರೋಗಿಗಳ ತಪಾಸಣೆ ನಡೆಸಿ ಅಗತ್ಯ ಔಷಧಿಗಳನ್ನು ವಿತರಿಸಲಾಯಿತು ಹಾಗೂ ಕಣ್ಣಿನ ಕಾಯಿಲೆಗೆ ಸಂಬಂಧಿಸಿ 165 ಜನರ ತಪಾಸಣೆ ನಡೆಸಿ ಅದರಲ್ಲಿ 50 ಜನರನ್ನು ಶಸ್ತ್ರಚಿಕಿತ್ಸೆಗೆ ಆಯ್ಕೆ ಮಾಡಲಾಯಿತು.

# ಆಂತರಿಕ ಗುಣಮಟ್ಟ ಭರವಸೆ ಕೋಶ ಹಾಗೂ ಅರ್ಥಶಾಸ್ತ್ರ ಅಧ್ಯಯನ ವಿಭಾಗದ ವಿಶೇಷ ಉಪನ್ಯಾಸ



**ನೈಜ್ಯ ದೆಸೆ ನ್ಯೂಸ್**

**ಪ್ರತಿಯೊಬ್ಬರ ದಿನ ನಿತ್ಯದ ಜೀವನದಲ್ಲಿ ಹಣ–ಕಾಸು ವ್ಯವಹಾರ ಸಾಮಾನ್ಯವಾಗಿದೆ. ಮನುಷ್ಯನ ಬೇಡಿಕೆಗಳನ್ನು ಪೂರೈಸಿಕೊಳ್ಳಲು ಅವಶ್ಯವಾಗಿ ಎಲ್ಲರಿಗೂ ಹಣ ಬೇಕು. ಹಣ ಗಳಿಸುವುದರ ಜತೆಗೆ ಉಳಿಸಿಕೊಂಡರೆ ಜೀವನದಲ್ಲಿ ಆರ್ಥಿಕವಾಗಿ ಪ್ರಗತಿ ಹೊಂದಲು ಸಾಧ್ಯ' ಎಂದು ತುರ್ವಿಹಾಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ವೆಂಕಟರಮಣ ಹೇಳಿದರು.**

ಪಟ್ಟಣದ ಪಂಪಣ್ಣ ಶರಣಪ್ಪ ಗುಗ್ಗಳಶೆಟ್ರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಂತರಿಕ ಗುಣಮಟ್ಟ ಭರವಸೆ ಕೋಶ (ಐಕ್ಯೂಎಸಿ) ಹಾಗೂ ಅಥ–'ಶಾಸ್ತ್ರ ಅಧ್ಯಯನ ವಿಭಾಗದ ವತಿಯಿಂದ ಮಂಗಳವಾರ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು. ಯಾವುದಕ್ಕೆ ಹಣ ಖರ್ಚು ಮಾಡಬೇಕು ಅಥ–'ವಾ ಖರ್ಚು ಮಾಡಬಾರದು. ಖರ್ಚುಗಳನ್ನು ಹೇಗೆ ನಿಭಾಯಿಸಬೇಕು ಮತ್ತು ಉಳಿತಾಯವನ್ನು ಹೇಗೆ ಮಾಡಬೇಕು ಎಂಬುದರ ಕು–ರಿತಾಗಿ ಇರುವ ಜ್ಞಾನವೇ ಪ್ರತಿಯೊಬ್ಬರನ್ನು ಆರ್ಥಿಕವಾಗಿ ಯಶಸ್ವಿಗೊಳಿಸುತ್ತದೆ' ಎಂದರು.

'ಹಣ ಖರ್ಚು ಮಾಡುವುದರಲ್ಲಿ ಅಥವಾ ವಸ್ತು ಸೇವೆಗಳನ್ನು ಪಡೆಯುವಲ್ಲಿಯೂ ಕ್ರಮದ ಜತೆಗೆ ಶಿಸ್ತು ಇದೆ. ಹಣ ಗಳಿಕೆ ಮಾಡುವವರು ಯಾರೇ ಆದರೂ ಅವರು ಮೊದಲು ತಮ್ಮ ಅವಶ್ಯಕತೆಗಳಿಗೆ ಖರ್ಚು ಮಾಡಬೇಕು. ಆನಂತರ ಐಷಾರಾಮಿಗಳಿಗೆ ಖರ್ಚು ಮಾಡಬೇಕು' ಎಂದು ಹೇಳಿದರು. ಐಕ್ಯೂಎಸಿ ಸಂಚಾಲಕ ಹಾಗೂ ಇಂಗ್ಲಿಷ್ ವಿಭಾಗದ ಮುಖ್ಯಸ್ಥರೂ ಆದ ರಕ್ಷಿತ್.ಎ ಮಾತನಾಡಿ,' ಬೌದ್ಧಿಕ ಮಟ್ಟ ಹೆಚ್ಚಿಸುವುದು ಮಾತ್ರವಲ್ಲದೆ ಸಾಮಾನ್ಯ ವ್ಯವಹಾರ ಜ್ಞಾನವನ್ನು ಕಲಿಸುವಲ್ಲಿಯೂ ಈ ಉಪನ್ಯಾಸ ಸಹಕಾರಿಯಾಗಿದೆ' ಎಂದರು.

ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ವೀರೇಶ್ ಕೆಂಗಲ್, ಶರಣಪ್ಪ ಸಾಸಲಮರ್ಡಿ, ಬೋರಯ್ಯ ಹಾಗೂ ಪತ್ರಿಕೋದ್ಯಮ ವಿಭಾಗದ ವಿಜಯ ಸರೋದೆ, ಬಸವರಾಜ. ಎಲ್.ಚಿಗರಿ ಇದ್ದರು. ವಿದ್ಯಾರ್ಥಿನಿ ಚೈತ್ರಾ ಪ್ರಾರ್ಥಿಸಿದರು. ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಸಂಗಮೇಶ ನಿರೂಪಿಸಿದರು.

## ತಾಲೂಕು ಕ್ರೀಡಾಂಗಣದಲ್ಲಿ ಕೊಪ್ಪಳ ಹೋಳಿ ಹಬ್ಬ–2.0

**ನೈಜ್ಯ ದೆಸೆ ನ್ಯೂಸ್**

**ಕೇಂದ್ರದಲ್ಲಿ ಬಣ್ಣಗಳ ಹಬ್ಬ ಹೋಳಿಯನ್ನು ನಗರದ ಜನತೆ ಕುಟುಂಬ ಸಮೇತ ಸಡಗರ ಮತ್ತು ಸುರಕ್ಷತೆಯಿಂದ ಆಚರಿಸಲು ಜಿಲ್ಲಾ ಅಥ–ಟಿಕ್ಸ್ ಅಸೋಸಿಯೇಷನ್ ವೇದಿಕೆ ಸಿದ್ಧಪಡಿಸಿದೆ. ಮಾರ್ಚ್ 4 ರಂದು ನಗರದ ತಾಲೂಕು ಕ್ರೀಡಾಂಗಣದಲ್ಲಿ ಕೊಪ್ಪಳ ಹೋಳಿ ಹಬ್ಬ–2.0 ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸದ ಹಾಗೂ ಅಥ್ಲೆಟಿಕ್ಸ್ ಅಸೋಸಿಯೇಷನ್ ಅಧ್ಯಕ್ಷ ರಾಜಶೇಖರ ಹಿಟ್ನಾಳ ತಿಳಿಸಿದರು.**



ನಗರದಲ್ಲಿ ಗುರುವಾರ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದರು. ಈ ಬಾರಿಯ ಹೋಳಿ ಆಚರಣೆಯಲ್ಲಿ ಸಾರ್ವಜನಿಕರ ಮನರಂಜನೆ ಹಾಗೂ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಖ್ಯಾತತ ಡಿಜೆ ನಕುಲ್ ಸಂಗೀತ, ಮಳೆ ನೃತ್ಯದೊಂದಿಗೆ ಹೆಜ್ಜೆ ಹಾಕಲು ವಿಶೇಷ ವ್ಯವಸ್ಥೆ ಮಾಡಲಾಗಿದೆ. ನಾಡಿನ ಜನಪ್ರಿಯ ನಿರೂಪಕರು ಇಡೀ ಕಾರ್ಯಕ್ರಮವನ್ನು ನಡೆಸಿಕೊಟ್ಟು ಮೆರುಗು ನೀಡಲಿದ್ದಾರೆ ಎಂದರು. ಮಹಿಳೆಯರು ಮತ್ತು ಪುರುಷರಿಗೆ ಪ್ರತ್ಯೇಕವಾಗಿ ನೃತ್ಯ ಮಾಡಲು ವ್ಯವಸ್ಥೆ ಮಾಡಲಾಗಿದೆ. ಇಡೀ ಕ್ರೀಡಾಂಗಣವು ಸಿಸಿಟಿವಿ ಕ್ಯಾಮೆರಾಗಳ ಕಣಾವಲಿನಲ್ಲಿ ಇರಲಿದೆ. ಕಾರ್ಯಕ್ರಮಕ್ಕೆ ಬರುವ ಜನರಿಗೆ ಅಸೋಸಿಯೇಷನಿಂದಲೇ ಬೆಳಗಿನ ಉಪಹಾರ ಹಾಗೂ ಬಣ್ಣಗಳನ್ನು ಒದಗಿಸಲಾಗುವುದು. ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗೆ ನಾವು ಹೆಚ್ಚಿನ ಒತ್ತು ನೀಡಿದ್ದೇವೆ. ಕೊಪ್ಪಳದ ಜನತೆ ಒಂದೇ ಸೂರಿನಡಿ ನಿರ್ಭಯವಾಗಿ, ಸಡಗರದಿಂದ ಹಬ್ಬ ಆಚರಿಸಲು ಇದು ಉತ್ತಮ ಅವಕಾಶ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ತಿಳಿಸಿದರು. ಜಿಲ್ಲಾ ಅಥ್ಲೆಟಿಕ್ಸ್ ಅಸೋಸಿಯೇಷನ್ ಉಪಾಧ್ಯಕ್ಷ ಶ್ರೀನಿವಾಸ ಗುಪ್ತ, ನಗರಸಭೆ ಮಾಜಿ ಸದಸ್ಯ ರಾಮಣ್ಣ ಹದ್ದಿನ, ಪರಶುರಾಮ ಕಿಡದಾಳ ಇದ್ದರು. " ಸದ್ಯದ ಯೋಜನೆಯಂತೆ ಬೆಳಗ್ಗೆ ಮೆರವಣಿಗೆ ನಡೆಸಿ, ವಿದ್ಯಾರ್ಥಿಗಳ ಪರೀಕ್ಷೆ ಮುಗಿದ ನಂತರದಲ್ಲಿ ಸಂಭ್ರಮಾಚರಣೆಯ ಹೋಳಿ ಹಬ್ಬ–2.0 ಕಾರ್ಯಕ್ರಮವನ್ನು ಪ್ರಾರಂಭಿಸುವ ಯೋಚನೆ ಇದೆ. ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತೆಗೆದುಕೊಳ್ಳುವ ನಿರ್ಧಾರವನ್ನು ಶೀಘ್ರವೇ ತಿಳಿಸುತ್ತೇವೆ.

# ಎರಡನೆ ದಿನ ಕಾಲಿಟ್ಟ ಹೋರಾಟ ಸಮಿತಿ ಧರಣಿ ಸತ್ಯಾಗ್ರಹ

**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟೆ: ತಾಲೂಕಿನ ಮೇಲೆಶ್ವರ ಗ್ರಾಮದ ಹತ್ತಿರ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಗುರುತಿಸಲಾದ ಸ್ಥಳವನ್ನು ವಿರೋಧಿಸಿ, ತಾಳಿಕೋಟ ಪಟ್ಟಣದಲ್ಲಿಯೇ ಪ್ರಜಾಸೌಧ ಕಟ್ಟಡ ನಿರ್ಮಿಸುವಂತೆ ಒತ್ತಾಯಿಸಿ ತಾಳಿಕೋಟೆ ತಾಲ್ಲೂಕು ಹೋರಾಟ ಸಮಿತಿ ವತಿಯಿಂದ ಪಟ್ಟಣದ ಬಸವೇಶ್ವರ ವೃತ್ತದ ಬಳಿ ನಡೆಯುತ್ತಿರುವ ಅನಿರ್ಧಿಷ್ಟಅವಧಿ ಧರಣಿ ಸತ್ಯಾಗ್ರಹವು ಗುರುವಾರ ಎರಡನೆ ದಿನಕ್ಕೆ ಕಾಲಿಟ್ಟಿದೆ.**

ಎರಡನೆ ದಿನ ದಲಿತ ಸಂಘರ್ಷ ಸಮಿತಿ ಹಾಗೂ ಅಂಬೇಡ್ಕರ್ ಸಮಾಜ ತಾಳಿಕೋಟಿ ಈ ಹೋರಾಟಕ್ಕೆ ಬೆಂಬಲಿಸಿ ಸತ್ಯಾಗ್ರಹ ನಡೆಸಿದರು. ವಿಜಯಸಿಂಗ್ ಹಾಜೇರಿ ತಾಳಿಕೋಟಿ ಪ್ರವಾಸಿ ಮಂದಿರದಲ್ಲಿ ಆದರೆ ನಾಲ್ಕು ದಿಕ್ಕಿ ನಿಂದ ಬರುವ ಸರ್ವಾಜನಿಕರಿಗೆ ಅನಕೂಲಆಗುತ್ತೆ, ಮೇಲೆಶ್ವರ್




ಗ್ರಾಮ ಹತ್ತಿರ ಆದರೆ, ದೇವರ ಹಿಪ್ಪರಗಿ ಕಡೆ ಇಂದ, ಮುಕಿಹಾಳ,ಬಳಗಾನೂರ ಭಾಗ ದಿಂದ ಹಾಗೂ ತಾಳಿಕೋಟಿ, ಮಹಿಳಯರಿಗೆ, ಅಂಗವಿಕಲ–ರಿಗೆ, ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ, ತುಂಬಾ ಅನಾನುಕೂಲ ಆಗುತ್ತೆ, ಸುಂದರ ವಾದ ಪ್ರಜಾಸೌದ್ ಪ್ರವಾಸಿ ಮಂದಿರದಲ್ಲಿ ಆದಾರೆ ಎಲ್ಲಾ ತಾಳಿಕೋಟೆ ತಾಲೂಕು ಗ್ರಾಮಗಳಿಂದ ಬರುವ ರೈತರಿಗೆ ಅನಕೂಲಕರವಾಗುತ್ತದೆ ಎಂದು ಮಾತನಾಡಿದರು.

ಈ ಸಂದರ್ಭದಲ್ಲಿ ಎಸ್ ಬಿ ಕಟ್ಟಿಮನಿ, ಆರ್ ಎಸ್ ಪಾಟೀಲ (ಕುಚಬಾಳ) ಮತ್ತಪ್ಪ ಚಮಲಾಪುರ, ಕಾಶೀನಾಥ ಮುರಾಳ, ಮುರಿಗೆಪ್ಪ ಸರಶೆಟ್ಟಿ, ಪ್ರಕಾಶ ಹಜೇರಿ, ಮುದಕಪ್ಪ ಬಡಿಗೇರ ನಾಗೇಶ್ ಕಟ್ಟೆಮನಿ, ಮಹೇಶ್ ಚಲವಾದಿ, ರವಿ ಕಟ್ಟಿಮನಿ ಮಹಾಂತೇಶ್ ಕಟ್ಟಿಮನಿ, ಬಸವರಾಜ ಬಿಸನಾಳ, ಸಿದ್ದು ಕಟ್ಟಿಮನಿ, ಯಶವಂತ ಕುಚುಬಾಳ ಶಂಕರ ಪಡಸಾಲಿ ರಾಮಣ್ಣ ಕಟ್ಟಿಮನಿ, ರಾಜು ಅಲ್ಲಾಪುರ, ನೀಲಪ್ಪ ಕಟ್ಟಿಮನಿ, ಪರಶುರಾಮ್ ನಾವದಗಿ, ಕಾಶಿನಾಥ್ ಹಡಗಿನಾಳ, ಗುರಪ್ಪ ಚಲವಾದಿ, ರಾಘು ಪಡಸಾಲಿ ಕಾಶಿನಾಥ ಕಟ್ಟಿಮನಿ, ಸಿದ್ದು ಅಸಂತಪುರ, ಸಂಜು ಬರದೇನಾಳ,ಲಾಡಪ್ಪ ಮುಖಿಹಾಳ, ಪರಶುರಾಮ ಮಾದರ್ ನಿಂಗನಗೌಡ ದೇಸಾಯಿ. ಸಮಾಜದ ಗಣ್ಯರು ಉಪಸ್ಥಿತರಿದ್ದರು.

## ರಾಜ್ಯದ ಹಲವೆಡೆ ಗುಡುಗು ಸಹಿತ ಮಳೆ ಮುನ್ಸೂಚನೆ–11 ಜಿಲ್ಲೆಗಳಿಗೆ 'ಯೆಲ್ಲೋ ಅಲರ್ಟ್' ಘೋಷಣೆ

**ನೈಜ್ಯ ದೆಸೆ ನ್ಯೂಸ್**

**ರಾಜ್ಯದ ವಿವಿಧೆಡೆ ಹವಾಮಾನದಲ್ಲಿ ಏರುಪೇರಾಗಿದ್ದು, ಕಳೆದ ರಾತ್ರಿ ಧಾರವಾಡ, ಹುಬ್ಬಳ್ಳಿ ಹಾಗೂ ರಾಯಚೂರು ಸೇ–ರಿದಂತೆ ಹಲವು ಜಿಲ್ಲೆಗಳಲ್ಲಿ ಗುಡುಗು ಮತ್ತು ಸಿಡಿಲು ಸಹಿತ ಮಳೆಯಾಗಿದೆ.**

ಭಾರತೀಯ ಹವಾಮಾನ ಇಲಾಖೆಯ (IMD) ಇತ್ತೀಚಿನ ವರದಿಯ ಪ್ರಕಾರ, ಇಂದೂ ಸಹ ರಾಜ್ಯದ ಹಲವು ಜಿಲ್ಲೆಗಳಲ್ಲಿ ಮಳೆ ಮುಂದುವರಿಯುವ ಸಾಧ್ಯತೆ ಇದೆ.



ಹವಾಮಾನ ಮುನ್ಸೂಚನೆ: ರಾಜ್ಯದ ಹಲವು ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಸಹಿತ ಲಘು ಮಳೆಯಾಗುವ ಸಾಧ್ಯತೆಯಿದ್ದು, ಕೆಲವು ಪ್ರದೇಶಗಳಲ್ಲಿ ಬಲವಾದ ಬಿರುಗಾಳಿ ಬೀಸುವ ಮುನ್ಸೂಚನೆ ನೀಡಲಾಗಿದೆ 11 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್: ಮುನ್ನೆಚ್ಚ–ರಿಕಾ ಕ್ರಮವಾಗಿ ಹವಾಮಾನ ಇಲಾಖೆಯು ಒಟ್ಟು 11 ಜಿಲ್ಲೆಗಳಿಗೆ 'ಯೆಲ್ಲೋ ಅಲರ್ಟ್' ಘೋಷಿಸಿದೆ.ಬೀದರ್, ಕಲಬುರಗಿ, ರಾಯಚೂರು, ವಿಜಯಪುರ ಮತ್ತು ಯಾದಗಿರಿ,ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರು, ಮಂಡ್ಯ ಹಾಗೂ ಚಾಮರಾಜನಗರ. ಯಾದಗಿರಿ, ರಾಯಚೂರು ಸೇರಿದಂತೆ ದಕ್ಷಿಣ ಕರ್ನಾಟಕದ ಹಾಸನ, ಕೊಡಗು, ಮೈಸೂರು ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಗುಡುಗು–ಸಿಡಿಲು ಸಹಿತ ತುಂತುರು ಮಳೆಯಾಗುವ ಸಾಧ್ಯತೆ ಹೆಚ್ಚಿದೆ ಎಂದು ಇಲಾಖೆ ತಿಳಿಸಿದೆ. ಮಳೆ ಮತ್ತು ಬಿರುಗಾಳಿ ಬೀಸುವ ಸಂದರ್ಭದಲ್ಲಿ ಸಾರ್ವಜನಿಕರು ಸುರಕ್ಷಿತ ಸ್ಥಳಗಳಲ್ಲಿ ಆಶ್ರಯ ಪಡೆಯಬೇಕು ಹಾಗೂ ಸಿಡಿಲಿನ ಅಪಾಯವಿರುವುದರಿಂದ ಮರದ ಕೆಳಗೆ ಅಥವಾ ವಿದ್ಯುತ್ ಕಂಬಗಳ ಬಳಿ ನಿಲ್ಲಬಾರದೆಂದು ಕೋರಲಾಗಿದೆ.

# ಭಾರತದ ಸಮಾಜ ಸಮಗ್ರ ಬದಲಾವಣೆಯಾಗದೆ ಜಾತಿ ನಿರ್ಮೂಲನೆ ಅಸಾಧ್ಯ: ಎಂ.ಗಂಗಾಧರ

**ನೈಜ್ಯ ದೆಸೆ ನ್ಯೂಸ್**

**ಫೆ.28 ರಂದು ನಗರದ ಶಾದಿ ಮಹಲ್ ನಲ್ಲಿ ಸಿಪಿಐ (ಎಂಎಲ್)ರೆಡ್ ಸ್ಟಾರ್ ಕಮ್ಯುನಿಸ್ಟ್ ಪಕ್ಷದ ವತಿಯಿಂದ ವಿಚಾರ ಸಂಕಿರಣ ಏರ್ಪಡಿಸಲಾಗಿದೆ. ವಿಚಾರ ಸಂಕಿರಣದಲ್ಲಿ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಕಮ್ಯುನಿಷ್ಟರ ಪಾತ್ರ ಹಾಗೂ ಜಾತಿ ನಿರ್ಮೂಲನೆಗಾಗಿ ಮಾರ್ಕ್ಸ್‌ವಾದಿ ಹಾಗೂ ಅಂಬೇಡ್ಕರ್ ವಾದಿಗಳ ಐಕ್ಯತೆ ಸವಾಲುಗಳು ಎಂಬ ಎರಡು ಮಹತ್ವದ ರಾಷ್ಟ್ರೀಯ ವಿಷಯಗಳ ಮೇಲೆ ವಿಷಯ ಮಂಡನೆ ಹಾಗೂ ಚರ್ಚೆ ನಡೆಯಲಿದೆ ಎಂದು ರಾಜ್ಯ ಸಮಿತಿ ಸದಸ್ಯರಾದ ಎಂ.ಗಂಗಾಧರ ಹೇಳಿದರು.**

ನಗರದ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ವಿಷಯ ಮಂಡನೆಗಾಗಿ ಕಮ್ಯುನಿಸ್ಟ್ ಪಕ್ಷದ ಪಾಲಿಟಿ ಬ್ಯುರೊ ಸದಸ್ಯರಾದ ಆರ್.ಮಾನಸಯ್ಯ, ಪಕ್ಷದ ರಾಜ್ಯ ಕಾರ್ಯದರ್ಶಿ ಕಾಮ್ರೆಡ್ ಬಿ.ರುದ್ರಯ್ಯ ಭಾಗವಹಿಸಲಿದ್ದಾರೆ. ಹಾಗೂ ಉಪನ್ಯಾಸಕರು ಪ್ರಗತಿಪರ ಚಿಂತಕರು ನಾರಾಯಣ ಬೆಳಗುರ್ಕಿ,




ಸಾಮಾಜಿಕ ಹೋರಾಟಗಾರ ಹಾಗೂ ಸಾಂಸ್ಕೃತಿಕ ಚಿಂತಕ ಹೆಚ್.ಎನ್.ಬಡಿಗೇರ್ ಸಂವಾದಕರಾಗಿ ಮಾತನಾಡಲಿದ್ದಾರೆ. ಪಕ್ಷದ ಜಿಲ್ಲಾ ಕಾರ್ಯದರ್ಶಿ ಎಂ.ಡಿ ಅಮೀರ ಅಲಿ ಅಧ್ಯಕ್ಷತೆ ವಹಿಸಲಿದ್ದಾರೆ. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ರೈತರು ಕಾರ್ಮಿಕರು ಆದಿವಾಸಿಗಳನ್ನು ಸಂಘಟಿಸಿ ಬಹುದೊಡ್ಡ ಬಲಿದಾನ ಮಾಡಿದ ಕಮ್ಯುನಿಷ್ಟರ ಪಾತ್ರವನ್ನು ಇಂದು ಬಲಪಂಥೀಯ ಉಗ್ರವಾದಿ ಚಿಂತಕರು ಹಾಗೂ ಪ್ರಚಾರಕರು ಯೋಜನಾ ಬದ್ಧವಾಗಿ ಗೌಣಗೊಳಿಸುತ್ತಿದ್ದಾರೆ.

ಅಲ್ಲದೇ ಸ್ವಾತಂತ್ರ್ಯ ಚಳುವಳಿಯಲ್ಲಿ ಕಮ್ಯುನಿಸ್ಟರು ಎಂತಹ ಸ್ವಾತಂತ್ರ್ಯಕ್ಕಾಗಿ ಹೋರಾಡಿದರೆಂಬ ಸತ್ಯಾಂಶವು ಹೊಸ ತಲೆಮಾರಿನ ಜನಗಳಿಗೆ ಅಪರಿಚಿತವಾಗಿದೆ. ಸ್ವಾತಂತ್ರ್ಯ ಚಳುವಳಿ ಅಶೋತ್ತರಗಳು ಇದುವರೆಗೂ ಈಡೇರದೆ ಹೋದ ವಾಸ್ತವನ್ನು ಚರ್ಚಿಸಬೇಕಾಗಿದೆ. ಈ ಮೂಲಕ ದುಡಿಯುವರ್ಗ ಹಾಗು ದಮನಿತ ಜನಗಳ ವಿಮುಕ್ತಿಗಾಗಿ ಅಪೂರ್ಣಗೊಂಡ ಸ್ವಾತಂತ್ರ್ಯ ಚಳುವಳಿಯನ್ನು ಇಂದು ಮುಂದುವರಿಸಬೇಕಾಗಿದೆ. ಭಾರತ ಸಮಾಜದ ಸಮಗ್ರ ಬದಲಾವಣೆ ಚಳುವಳಿಯು ಜಾತಿ ನಿರ್ಮೂಲನೆಯಾಗದೆ ಅಸಾಧ್ಯ ಎಂಬ ಪರಮ ಸತ್ಯವನ್ನು ನಾವೆಲ್ಲರೂ ಕೂಡ ಮನಗಾಣಬೇಕಾಗಿದೆ. ಭಾರತದ ಸಾಮಾಜಿಕ ಸಂರಚನೆಯು ರಷಿಯಾ ಹಾಗೂ ಚೀನಾಕ್ಕಿಂತ ಭಿನ್ನವಾಗಿದೆ.

ಇಲ್ಲಿನ ಜಾತಿ ವ್ಯವಸ್ಥೆ ವರ್ಗ ಶೋಷಣೆಯ ಅವಿಭಾಜ್ಯ ಅಂಗವಾಗಿದೆ. ವರ್ಗ ಹಾಗೂ ಜಾತಿಯನ್ನು ಯಾಂತ್ರಿಕವಾಗಿ ಪ್ರತ್ಯೇಕಿಸುವ ತಪ್ಪಾದ ಧೋರಣೆಯನ್ನು ಕಮ್ಯುನಿಸ್ಟ್ ಚಳುವಳಿಯಲ್ಲಿ ಅನುಸರಿಸಲಾಗಿದೆ. ಇದನ್ನು ತಿದ್ದಿಕೊಳ್ಳದೆ, ಜಾತಿ ಹಾಗೂ ವರ್ಗ ಒಂದರಿಂದ ಮತ್ತೊಂದು ಪ್ರತ್ಯೇಕಗೊಳ್ಳದ ಜಂಟಿ ಸವಾಲ್ ಎಂದು ಕಮ್ಯುನಿಸ್ಟ್ ಪಕ್ಷಗಳು ಪುನರ್ ಮನನ ಮಾಡಿಕೊಳ್ಳಬೇಕಾಗಿದೆ. ಇದಕ್ಕಾಗಿ ಮಾರ್ಕ್ಸ್‌ವಾದಿಗಳು ಹಾಗೂ ಅಂಬೇಡ್ಕರ್ ವಾದಿಗಳೊಂದಿಗೆ ಐಕ್ಯ ಹೋರಾಟ ಕಟ್ಟಲು ಅಡ್ಡ ಬರುವ ಸಮಸ್ಯೆಗಳ ಪರಿಹಾರಕ್ಕೆ ಮುಂದಾಗಬೇಕಾಗಿದೆ. ಇಂಥದೊಂದು ಮಹತ್ವದ ಉದ್ದೇಶದಿಂದ ಈ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿದೆ. ಹಾಗಾಗಿ ಎಲ್ಲಾ ಪ್ರಗತಿಪರ ಸ್ನೇಹಿತರು, ಅದರಲ್ಲೂ ವಿವಿಧ ಕಮ್ಯುನಿಸ್ಟ್ ಪಕ್ಷಗಳ, ವಿವಿಧ ದಲಿತ ಸಂಘಟನೆಗಳ ಚಿಂತಕರು, ಮುಂದಾಳುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ವಿಚಾರ ಸಂಕಿರಣವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿಕೊಂಡರು. ಈ ವೇಳೆ: ಸಿಪಿಐಎಂಎಲ್ ರೆಡ್ ಸ್ಟಾರ್ ಪಾರ್ಟಿ ಜಿಲ್ಲಾ ಸಮಿತಿ ಸದಸ್ಯರಾದ, ಆದೇಶ ಹಿರೇನಗನೂರ, ಯಲ್ಲಪ್ಪ ಊಟಕನೂರು, ಹೆಚ್.ಆರ್.ಹೊಸಮನಿ, ತಾಲೂಕು ಸಮಿತಿ ಸದಸ್ಯ ಮುದಿಯಪ್ಪ ಹೆಚ್. ಎನ್.ಕ್ಯಾಂಪ್, ಸೇರಿದಂತೆ ಇತರರು ಇದ್ದರು.